# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:02 • ಸಂಚಿಕೆ:04 • ನೋಂದಣಿ ನಂ.:KARKAN27911 • ವಿಜಯನಗರ • 25.06.2024 • ಮಂಗಳವಾರ • ಪುಟ:04 • ಬೆಲೆ:2
Volume:02 • Issue:04 • Reg.No:KARKAN27911 • VIJAYANAGARA • 25.06.2024 • Tuesday • Page:04 • Rs:2







## ತ್ಯಾಜ್ಯ ನಿರ್ವಹಣೆಗೆ ಎಲ್ಲರೂ ಕೈಜೋಡಿಸಿ ಬಳಸಿ ಬೀಸಾಡುವ ಮುನ್ನ ಯೋಚಿಸಿ

### ಎನ್‌ಎಸ್‌ಎಸ್‌ನಲ್ಲಿ ಶರಣಬಸಪ್ಪ ಪಟ್ಟೆದ್, ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರತಿದಿನ ಒಬ್ಬ ಮನುಷ್ಯನಿಂದ ಸುಮಾರು 250 ರಿಂದ 300 ಗ್ರಾಂ ವರೆಗೆ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಆದರೆ ಇದರ ನಿರ್ವಹಣೆ ಉತ್ತಮ ರೀತಿಯಲ್ಲಿ ಆಗುತ್ತಿಲ್ಲ. ದಿನನಿತ್ಯ ಉತ್ಪತ್ತಿಯಾಗುವ ತ್ಯಾಜ್ಯದಿಂದ ಮಣ್ಣು, ಗಾಳಿ ಮತ್ತು ನೀರು ಕಲುಷಿತವಾಗುತ್ತಿದೆ. ತ್ಯಾಜ್ಯ ನಿರ್ವಹಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಜೊತೆಗೆ ಕೈಜೋಡಿಸಬೇಕು ಎಂದು ವಿಜಯನಗರದ ಕ್ಯಾಶುಟೇಕ್ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಾಹಕರಾದ ಶರಣಬಸಪ್ಪ ಪಟ್ಟೆದ್ ಅವರು ಅಭಿಪ್ರಾಯ ಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಸೋಮವಾರ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ತ್ಯಾಜ್ಯ ನಿರ್ವಹಣೆಯಲ್ಲಿ




ಸ್ಥಳೀಯ ಸಂಸ್ಥೆಗಳ ಹಾಗೂ ಯುವಕರ ಪಾತ್ರ ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡುತ್ತಾ ನಾವು ಪ್ರತಿ ದಿನ ಬಳಸುವ ವಸ್ತುಗಳು ಮರುಬಳಕೆ ಆಗುವಂತೆ ಬೇರ್ಪಡಿಸಬೇಕು. ಜನರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸಬೇಕು. ತ್ಯಾಜ್ಯದಲ್ಲಿ ಹಸಿಕಸ ಮತ್ತು ಒಣಕಸವನ್ನು ಮನೆಯಲ್ಲಿಯೇ ಬೇರ್ಪಡಿಸಬೇಕು. ಎನ್ ಎಸ್ ಎಸ್ ಶಿಬಿರಾರ್ಥಿಗಳು ಸಮಾಜಮುಖಿ ಕೆಲಸ ಮಾಡುತ್ತಿರುವುದರಿಂದ ಕಸವಿಲೇವಾರಿ ಬಗ್ಗೆ ತಿಳಿಸಬೇಕು ಎಂದರು. ಸರ್ಕಾರಗಳು ಸಾಕಷ್ಟು ಪ್ರಯತ್ನ ಮಾಡುತ್ತಿವೆ. ಇದಕ್ಕಾಗಿಯೇ ಹಲವಾರು ಯೋಜನೆಗಳನ್ನು ಸಹ ತಂದಿವೆ. ನಮಗೆ ತ್ಯಾಜ್ಯ ಎಂದರೆ ಬೇಡವಾದ ವಸ್ತುವಾಗಿ ಪರಿಣಮಿಸುತ್ತಿದೆ. ಆದರೆ ಇನ್ನೊಬ್ಬರಿಗೆ ಅದು ಸಂಪನ್ಮೂಲವಾಗುತ್ತದೆ. ತ್ಯಾಜ್ಯವನ್ನು ಸಂಪನ್ಮೂಲವಾಗಿ ಬಳಸಬೇಕಾದರೆ ಉತ್ತಮ ರೀತಿಯಲ್ಲಿ ಬೇರ್ಪಡಿಸುವುದು ಮುಖ್ಯ ಎಂದರು.

ಕ್ಯಾಶೋಟೆಕ್ ಸಂಸ್ಥೆಯ ತರಬೇತಿ ತಜ್ಞರಾದ ಬಾಲಚಂದ್ರ ಜಾಬ್ ಶೆಟ್ಟಿ ಅವರು >>4

## ಜೂನ್ 29ಕ್ಕೆ ಉಪವಿಭಾಗ ಮಟ್ಟದ ನಿಗಾ ಸಮಿತಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ದಿ ಪ್ರೊಹಿಬಿಷನ್ ಆಫ್ ಎಂಪ್ಲಾಯ್‌ಮೆಂಟ್ ಆ್ಯಸ್ ಮ್ಯಾನ್ಯೂವಲ್ ಸ್ಕ್ಯಾವೆಂಜರ್ಸ್ ಆ್ಯಂಡ್ ದೇರ್ ರಿಹ್ಯಾಬಿಲಿಟೇಷನ್ ಆ್ಯಕ್ಟ್ (The prohibhition of employment as manual scavengers and their rehabilitation act) 2013 ರನ್ವಯ ಹೊಸಪೇಟೆ ಉಪವಿಭಾಗ ಮಟ್ಟದ ನಿಗಾ ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ.

ಈ ಸಮಿತಿ ಸಭೆಯು ಜೂನ್ 29ರ ಬೆಳಿಗ್ಗೆ 11.30ಕ್ಕೆ ಹೊಸಪೇಟೆ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಹಾಯಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ನಡೆಯಲಿದೆ. ಸಮಿತಿಯ ಸದಸ್ಯರು ಸಭೆಗೆ ತಪ್ಪದೇ ಆಗಮಿಸಬೇಕು ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಆಗಿರುವ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉಪವಿಭಾಗ ಮಟ್ಟದ ಜಾಗೃತಿ, ಉಸ್ತುವಾರಿ ಸಮಿತಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು 1995ರ ನಿಯಮ 17ರಂತೆ ಉಪವಿಭಾಗ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯು ಜೂನ್ 29ರಂದು ಬೆಳಿಗ್ಗೆ 11ಕ್ಕೆ ಹೊಸಪೇಟೆ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಹಾಯಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ನಡೆಯಲಿದೆ. ಈ ಸಭೆಗೆ ಸದಸ್ಯರು ಆಗಮಿಸಬೇಕು ಎಂದು ಹೊಸಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಜುಲೈ 1ಕ್ಕೆ ಜನಸ್ಪಂದನಾ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಹರಪನಹಳ್ಳಿಯಲ್ಲಿ ತಾಲೂಕು ಮಟ್ಟದ ಜನಸ್ಪಂದನಾ ಕಾರ್ಯಕ್ರಮವನ್ನು ಜುಲೈ 1ರಂದು ಆಯೋಜಿಸಲಾಗಿದೆ.

ಈ ಮೊದಲು ಜೂನ್ 24 ರಂದು ಹರಪನಹಳ್ಳಿಯಲ್ಲಿ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. ಜೂನ್ 24ರಂದು ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಕಲಬುರಗಿ ವಿಭಾಗದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆದ ಕಾರಣ ಹರಪನಹಳ್ಳಿ ತಾಲೂಕಿನಲ್ಲಿ ಜೂನ್ 24ರ ಬದಲಾಗಿ ಜುಲೈ 1 ರಂದು ಜಿಲ್ಲಾ ಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ತಾಲೂಕು ಮಟ್ಟದ ಜನಸ್ಪಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿರಬೇಕು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಲು ಅವಕಾಶವಿರುತ್ತದೆ ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಶಾಮಿಯಾನ ಹಾಕೋದು ಶ್ರೇಷ್ಠಕಾಯಕ

### ಎಸ್.ಎಸ್.ಎಲ್.ಡಿ.ಡಿ.ಎಂ.ಕೆ.ಸಂಘದ ಅಧ್ಯಕ್ಷ ಅಮರೇಶ ಬಿ.ಹಿರೇಮಠ ಹೇಳಿಕೆ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸಮಾಜದಲ್ಲಿ ಯಾವುದೇ ಕಾರ್ಯಕ್ರಮಗಳು ಸಮಾರಂಭಗಳೂ ಸೇರಿದಂತೆ ಸೂತಕ ದಮನೆಗಳಿಗೂ ಮಡಿಯುಡಿ ಇಲ್ಲದೆ ಕಾಯಕದಲ್ಲಿ ನಿರತರಾಗಿ ಶಾಮಿಯಾನ ಹಾಕುವುದು ಒಂದು ಶ್ರೇಷ್ಠ ಕಾಯಕವಾಗಿದೆ ಎಂದು ಎಸ್.ಎಸ್.ಎಲ್.ಡಿ.ಡಿ.ಎಂ.ಕೆ.ಸಂಘದ ಉತ್ತರ ಕರ್ನಾಟಕದ ಅಧ್ಯಕ್ಷರಾದ ರಾಯಚೂರಿನ ಅಮರೇಶ ಬಿ.ಹಿರೇಮಠರವರು ಅಭಿಪ್ರಾಯ ಪಟ್ಟರು.

ಪಟ್ಟಣದ ಮಾಲವಿಕ್ರಾಸ್ ಬಳಿಯ ಹರಿಹರ ರಸ್ತೆಯ ಜೆ.ಎಂ.ಫಾರಂ ಹೌಸ್‌ನಲ್ಲಿ ನಡೆದ ಶಾಮಿಯಾನ ಸಪ್ಲೇಯರ್ಸ್ ಲೈಟಿಂಗ್ ಧ್ವನಿವರ್ಧಕ ಮತ್ತು ಡೆಕೋರೇಷನ್ ಮಾಲೀಕರ ಕ್ಷೇಮಾಭಿವೃದ್ಧಿ ಸಂಘ ವಿಜಯನಗರ ಜಿಲ್ಲಾ ಸಂಘಟನೆಯ ಸಹಯೋಗದೊಂದಿಗೆ ತಾಲೂಕು ಘಟಕ ಸೋಮವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಜೀವನದ ಭವಿಷ್ಯಕ್ಕಾಗಿ ಕಾಯಕದಲ್ಲಿರುವ ಕಾರ್ಮಿಕರು ಸೇರಿದಂತೆ ಶಾಮಿಯಾನ ಮಾಲೀಕರು ಸಹ ವಿಮೆ ಮಾಡಿಸಬೇಕು ಎಂದು ಕರೆ ನೀಡಿದರು.

ವಿಜಯನಗರ ಜಿಲ್ಲಾಧ್ಯಕ್ಷ ಕೆ.ನರಸಿಂಹಮೂರ್ತಿ ಅಪ್ಪಣ್ಣ ಅಧ್ಯಕ್ಷತೆ ವಹಿಸಿ, ಬಿಡುವಿಲ್ಲದ ಸಮಯವಾಗಿದ್ದರೂ ಸಂಘಟನೆಯ ವಿಚಾರ ಬಂದಾಗ ಪ್ರತಿಯೊಬ್ಬರು ಸ್ಪಂದಿಸಬೇಕು. ಸರ್ಕಾರದ ಸೌಲಭ್ಯಗಳಿಗಾಗಿ ಒಗ್ಗಟ್ಟು ಮುಖ್ಯ. ಯಾವುದೇ ಸಂಘಟನೆಯಲ್ಲಿ ತೊಡಗಿಕೊಂಡಿದ್ದರೂ ನಾವೆಲ್ಲ




ಒಂದೇ ಎಂದು ಸಾರಿದರು. ಸಹಕರಿಸುವಂತೆ ಕೋರಿದರು.

ನಂದಿಪುರ ಕ್ಷೇತ್ರದ ಡಾ.ಮಹೇಶ್ವರ ಸ್ವಾಮೀಜಿ ಸಾನ್ನಿಧ್ಯವಹಿಸಿ, ಸಮಾರಂಭಗಳು ಯಶಸ್ವಿಗೆ, ಈ ಶಾಮಿಯಾನದವರ ಕೆಲಸ ಅಗ್ರಸ್ಥಾನದಲ್ಲಿರುತ್ತದೆ. ರಾಜಕೀಯ ಸೇರಿದಂತೆ ಪ್ರತಿಯೊಬ್ಬರು ಕಾರ್ಯಕ್ರಮಕ್ಕೂ ಮುನ್ನ ಶಾಮಿಯಾನದವರಿಗೆ ಗೌರವದಿಂದಲೇ ಮಾತನಾಡಿಸುತ್ತಾರೆ. ಬಳಿಕ ನಿಮ್ಮ ಸಾಮಗ್ರಿಗಳನ್ನು ಬೇಗ ಬೇಗ ತೆಗೆಯಬೇಕೆಂದು ಒತ್ತಾಯಿಸುತ್ತಾರೆ. ಒತ್ತಡದ ನಡುವೆ ಬದುಕುವ ನಿಮ್ಮ ಜೀವನಕ್ಕೆ ಭರವಸೆಯಾಗಿ ಸರ್ಕಾರ ನಿಮ್ಮ ಆಶೋತ್ತರಗಳನ್ನು ಈಡೇರಿಸುವಂತಾಗಬೇಕು ಎಂದರು.

ಈ ಸಂದರ್ಭದಲ್ಲಿ ಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮೀಜಿ, ಆಂದ್ರದ ಹೊನ್ನಳ್ಳಿಯ ಶಂಭುಲಿಂಗ ಶಿವಚಾರ್ಯ ಸ್ವಾಮೀಜಿಗಳು ಸಾನ್ನಿಧ್ಯವಹಿಸಿದ್ದರು. ತಾಲೂಕು ಅಧ್ಯಕ್ಷರಾದ ಎಚ್.ಎಂ.ಮಲ್ಲಯ್ಯ, ಖಜಾಂಚಿ ಎಚ್.ಎಂ.ಹನೀಫ್, ಹೂವಿನ ಹಡಗಲಿಯ ಕೆ.ಎಚ್.ಪ್ರಕಾಶ, ಹರಪನಹಳ್ಳಿಯ ಸೈಯದ್ ಸೈಫುಲ್ ಸಾಬ್, ಕೂಡ್ಲಿಗಿಯ ಮಂಜುನಾಥ, ಹೊಳಲಿನ ರವಿ ಬಡಿಗೇರ್, ಕೆ.ವಿನಾಯಕ ಕುಮಾರ್, ಕೆ.ರಾಜಶೇಖರ್, ಸಿ.ವಿರೇಶ, ಪವಾಡಿ ಮಂಜುನಾಥ, ವೈ.ಎಂ.ರೇಣೇಶ, ವಿರೇಶ, ಗೇಮ್ಯನಾಯ್ಕ್, ಅಗಳಿ ನವೀನ್, ಬನ್ನಿಕಲ್ಲು ಅಡವಿಪ್ಪಸ್ವಾಮಿ, ಖಾಜು ಹುಸೇನ್, ಮೇರಾಮುದ್ದೀನ್. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಸೋಮಶೇಖರ, ಹೊಸಪೇಟೆಯ ತಿರುಮಲೇಶ ನಿರ್ವಹಿಸಿದರು.

## ಜಿಲ್ಲೆಯಲ್ಲಿ ಜುಲೈ 13ರಂದು ರಾಷ್ಟ್ರೀಯ ಲೋಕ ಅದಾಲತ್

### ಹೊಸಪೇಟೆ ತಾಲೂಕು ಕಾನೂನು ಸೇವಾ ಸಮಿತಿಯಡಿಯಲ್ಲಿ 7 ನ್ಯಾಯಾಲಯದಲ್ಲಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಜನರು ದ್ವೇಷ ಮರೆತು ಸಹಬಾಳ್ವೆ ನಡೆಸಬೇಕು ಎಂಬ ಧ್ಯೇಯದೊಂದಿಗೆ ಜುಲೈ 13ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಹೊಸಪೇಟೆಯ ಪ್ರಧಾನ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ ನಾಗಲಾಪುರ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ನ್ಯಾಯಾಧೀಶರು, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಜುಲೈ 13ರಂದು ಲೋಕ ಅದಾಲತ್ ನಡೆಸಲು ಅನುಮತಿ ನೀಡಿದೆ. ಪ್ರಾಧಿಕಾರಿಗಳ ನಿರ್ದೇಶನದಂತೆ ರಾಜ್ಯಾದ್ಯಂತ ಏಕಕಾಲಕ್ಕೆ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಹೊಸಪೇಟೆ ತಾಲೂಕು ಕಾನೂನು ಸೇವಾ ಸಮಿತಿಯಡಿಯಲ್ಲಿ 7 ನ್ಯಾಯಾಲಯದಲ್ಲಿ ಲೋಕ ಅದಾಲತ್ ನಡೆಯಲಿದ್ದು, ಗೌರವಾನ್ವಿತ 3ನೇ ಹೆಚ್ಚುವರಿ ಮತ್ತು ಜಿಲ್ಲಾ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ್.ಎ.ನಂದಗಡಿ, ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಹೇಮಲತಾ ಬಿ.ಹುಲ್ಲೂರು, ಗೌರವಾನ್ವಿತ ಅಪರ ಹಿರಿಯ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್, ಗೌರವಾನ್ವಿತ ಪ್ರಧಾನ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಪ್ರಶಾಂತ ನಾಗಲಾಪುರ, ಗೌರವಾನ್ವಿತ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಅಶೋಕ ಆರ್.ಹೆಚ್, ಗೌರವಾನ್ವಿತ 2ನೇ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಸಂಜೀವಕುಮಾ.ಜಿ ಮತ್ತು 3ನೇ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಚೈತ್ರ.ಜೆ ಅವರು ಲೋಕ ಅದಾಲತ್ ನಡೆಸಲಿದ್ದಾರೆ.

ಲೋಕ ಅದಾಲತ್‌ನಲ್ಲಿ ವಾಜ್ಯ ಪೂರ್ವ ಪ್ರಕರಣಗಳು ಮತ್ತು ಬ್ಯಾಂಕಿನ ಪ್ರಕರಣಗಳು, ಚೆಕ್ ಬೌನ್ಸ್, ಹಣ ವಸೂಲಿ, ಕಾರ್ಮಿಕರ ವಿವಾದ ಪ್ರಕರಣಗಳು, ಸಾರ್ವಜನಿಕ ಸೇವೆಗಳಾದ ವಿದ್ಯುತ್ ಬಿಲ್, ನೀರಿನ ಬಿಲ್ ಸೇರಿದಂತೆ ಭೂ ವಿವಾದ ಪ್ರಕರಣಗಳು, ವಿವಾಹ ಸಂಬಂಧಿಸಿ ಪ್ರಕರಣಗಳು ಸೇರಿದಂತೆ ಇನ್ನಿತರ ಪ್ರಕರಣಗಳನ್ನು ಉಭಯ ಪಕ್ಷಗಾರರ ಕೋರಿಕೆಯ ಮೇರೆಗೆ ರಾಜೀ ಸಂಧಾನ ಮೂಲಕ ಇತ್ಯರ್ಥಗೊಳಿಸಲಾಗುವುದು. ಈ ರಾಷ್ಟ್ರೀಯ ಲೋಕ ಅದಾಲತ್‌ನ ಸದುಪಯೋಗ ಪಡಿಸಿಕೊಂಡು ಕಕ್ಷಿದಾರರು ತಮ್ಮ ವಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ತಾಲೂಕು ಕಾನೂನು ಸೇವಾ ಸಮಿತಿಯ ಸಹಾಯಕ ಎಸ್.ಬಿ.ಕಮತಗಿ (ಮೊ:9480662155) ಅವರನ್ನು ಸಂಪರ್ಕಿಸಲು ಕೋರಲಾಗಿದೆ ಎಂದು ನ್ಯಾಯಾಧೀಶರಾದ ಪ್ರಶಾಂತ ನಾಗಲಾಪುರ ತಿಳಿಸಿದ್ದಾರೆ.






## ಆಂಗ್ಲ ಭರಾಟೆಯಲ್ಲಿ ಕನ್ನಡ ಮರೆಯಬೇಡಿ

### ಸೇವಾ ಸಮಿತಿ ಅಧ್ಯಕ್ಷ ಡಿ.ವಿ.ಸತ್ಯನಾರಾಯಣ ಹೇಳಿಕೆ | ಕಸಾಪದಿಂದ 'ವಾರಾಹಿ' ಕಾದಂಬರಿ ಬಿಡುಗಡೆ




■ **ಹಂಪಿ ಟೈಮ್ಸ್ ಕಂಪ್ಲಿ**

ಜಾಗತೀಕರಣದ ಭರಾಟೆಯಲ್ಲಿ ಇಂಗ್ಲೀಷ್ ಭಾಷೆಯನ್ನು ಒಲೈಸಿಕೊಂಡು ಕನ್ನಡ ಭಾಷೆಯನ್ನು ಮರೆಯಬಾರದು. ಮಕ್ಕಳಿಗೆ ಇಂಗ್ಲೀಷ್ ಜೊತೆಗೆ ಕನ್ನಡ ಭಾಷೆಯ ಓದು, ಬರಹವನ್ನು ಕಲಿಸಬೇಕು ಎಂದು ಸತ್ಯ ಅರುಣೋದಯ ಸೇವಾ ಸಮಿತಿ ಅಧ್ಯಕ್ಷ ಡಿ.ವಿ.ಸತ್ಯನಾರಾಯಣ ಹೇಳಿದರು.

ಇಲ್ಲಿನ ಗುರುಮಠದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಭಾನುವಾರ ಹಮ್ಮಿಕೊಂಡಿದ್ದ ಲೇಖಕ ಬಂಗಿ ದೊಡ್ಡ ಮಂಜುನಾಥ ರಚಿಸಿದ 'ವಾರಾಹಿ' ಕಾದಂಬರಿ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಉನ್ನತ ಶಿಕ್ಷಣಗಳಿಸಿದವರು ಸಹ ದೋಷಪೂರಿತ ಕನ್ನಡ ಭಾಷೆಯ ಬರಹ ಬಳಸುತ್ತಿರುವುದು ವಿಷಾಧನೀಯ ಎಂದರು.

ಕಲಬುರಗಿಯ ಡಾ.ಅಂಬೇಡ್ಕರ್ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಅರುಣ್ ಜೋಳದ ಕೂಡ್ಲಿಗಿ ಕಾದಂಬರಿ ಬಿಡುಗಡೆಗೊಳಿಸಿ ಮಾತನಾಡಿ, ಫೇಸ್‌ಬುಕ್ ವ್ಯಾಟ್ಸಪ್, ಇನ್ಸ್ಟ್ರಾಗ್ರಾಮ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ಚುಟುಕಾಗಿ ತಕ್ಷಣ ಪ್ರತಿಕ್ರಿಯಿಸುವ ಕ್ರಿಯೆಯಿಂದಾಗಿ ದೀರ್ಘ ಬರಹ, ಓದಿನ ಕೊರತೆ ಎದ್ದುಕಾಣುತ್ತಿದೆ. ಜೊತೆಗೆ ಕಾದಂಬರಿ ಕ್ಷೇತ್ರ ಸೊರಗುತ್ತಿದೆ. ಸಾಹಿತ್ಯದಲ್ಲಿ ಕಾದಂಬರಿ ಮೂರನೇ ಸ್ಥಾನದಲ್ಲಿದ್ದು ಕಾದಂಬರಿ ರಚನೆಗೆ ದೀರ್ಘ ಧ್ಯಾನ, ಆಲೋಚನೆಯ ಅಗತ್ಯವಿದೆ. >>4

## ವಿಜ್ಞಾನ

# ಕೀಟಗಳು ಆಂಟೆನಾವನ್ನು ಏಕೆ ಹೊಂದಿರುತ್ತವೆ?

■ **ಆರ್.ಬಿ.ಗುರುಬಸವರಾಜ**

ಹುಲ್ಲಿನ ಮೇಲೆ ಕುಳಿತಿದ್ದ ಗ್ರಾಸ್‌ಹಾಪರ್ ಕೀಟವನ್ನು ನೋಡಿದ ತನುಶ್ರೀ ಅದನ್ನು ಕೈಯಿಂದ ಹಿಡಿದೇ ಬಿಟ್ಟಳು. "ಪಪ್ಪಾ ನೋಡಿಲ್ಲಿ!" ಎಂದು ಅದರ ಮೀಸೆಗಳನ್ನು ಹಿಡಿಯಲು ಮುಂದಾದಳು. 'ತನು ಮೀಸೆ ಮುಟ್ಟಬೇಡ' ಎಂದು ತಂದೆ ಅವಳನ್ನು ಎಚ್ಚರಿಸಿದರು. "ಪಪ್ಪಾ, ಕೀಟಗಳು ಏಕೆ ಆಂಟೆನಾ(ಮೀಸೆ) ಹೊಂದಿರುತ್ತವೆ? ಎಂದು ಪ್ರಶ್ನಿಸಿದಳು.

ಆಂಟೆನಾಗಳು ವಯಸ್ಕ ಕೀಟಗಳ ತಲೆಯ ಮೇಲೆ ಕಂಡುಬರುವ ವಿಶೇಷವಾದ ಉಪಾಂಗಗಳಾಗಿವೆ. ಅವು ಕೀಟಗಳ ಪ್ರಾಥಮಿಕ ಸಂವೇದನಾ ಅಂಗಗಳಾಗಿವೆ. ಆಂಟೆನಾಗಳು ರಾಸಾಯನಿಕಗಳು, ತಾಪಮಾನ, ಆರ್ದ್ರತೆ ಮತ್ತು ಧ್ವನಿಯಂತಹ ವಿವಿಧ ಪರಿಸರ ಪ್ರಚೋದಕಗಳನ್ನು ಪತ್ತೆಹಚ್ಚಲು ಮತ್ತು ಪ್ರತಿಕ್ರಿಯಿಸಲು ಕೀಟಗಳಿಗೆ ಸಹಾಯ ಮಾಡುತ್ತದೆ. ಕೀಟಗಳು ಆಂಟೆನಾಗಳನ್ನು ಆಹಾರ, ಸಂಭಾವ್ಯ ಸಂಗಾತಿಗಳು ಅಥವಾ ಪರಭಕ್ಷಕಗಳ ಉಪಸ್ಥಿತಿಯನ್ನು ಪತ್ತೆಹಚ್ಚುವಂತಹ ತಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಗ್ರಹಿಸಲು ಬಳಸುತ್ತವೆ.



ಕೀಟಗಳು 'ಫೆರೋಮೋನ್' ಎಂಬ ರಾಸಾಯನಿಕ ಸಂಕೇತಗಳ ಮೂಲಕ ಪರಸ್ಪರ ಸಂವಹನ ನಡೆಸಲು ತಮ್ಮ ಆಂಟೆನಾಗಳನ್ನು ಸಹ ಬಳಸುತ್ತವೆ. ಉದಾಹರಣೆಗೆ ಗಂಡು ಪತಂಗಗಳು ಸಂಭಾವ್ಯ ಸಂಗಾತಿಗಳನ್ನು ಪತ್ತೆಹಚ್ಚಲು ಮತ್ತು ಹೆಣ್ಣು ಪತಂಗಗಳು ಬಿಡುಗಡೆ ಮಾಡುವ ಫೆರೋಮೋನ್‌ಗಳನ್ನು ಪತ್ತೆಹಚ್ಚಲು ತಮ್ಮ ಆಂಟೆನಾಗಳನ್ನು ಬಳಸುತ್ತವೆ.

ಜೇನುನೊಣಗಳಂತಹ ಕೆಲವು ಕೀಟಗಳು ಮಾರ್ಗ ಹುಡುಕಾಟಕ್ಕಾಗಿ ತಮ್ಮ ಆಂಟೆನಾಗಳನ್ನು ಬಳಸುತ್ತವೆ. ಜೇನುನೊಣಗಳು ತಮ್ಮ ಆಂಟೆನಾಗಳ ಮೇಲೆ ವಿಶೇಷ ಸಂವೇದಕಗಳನ್ನು ಹೊಂದಿದ್ದು ಅದು ಭೂಮಿಯ ಕಾಂತೀಯ ಕ್ಷೇತ್ರವನ್ನು ಪತ್ತೆ ಮಾಡುತ್ತದೆ. ಇದು ತಮ್ಮ ಗಮ್ಯಸ್ಥಾನಕ್ಕೆ ಹುಡುಕಲು ಸಹಾಯ ಮಾಡುತ್ತದೆ.

ಆಂಟೆನಾಗಳು ಕೀಟಗಳಿಗೆ ದೇಹವನ್ನು ಸಮತೋಲನ ಮಾಡಲು ಸಹಾಯ ಮಾಡುತ್ತವೆ. ಉದಾಹರಣೆಗೆ ನೊಣ ಮೇಲೆ ಹಾರಿದಾಗ ಅಥವಾ ಕೆಳಗೆ ಇಳಿದಾಗ ದೇಹದ ಸಮತೋಲನವನ್ನು ಕಾಪಾಡಿಕೊಳ್ಳಲು ಆಂಟೆನಾಗಳನ್ನು ಬಳಸುತ್ತದೆ. ಪರಿಸರದಲ್ಲಿನ ಬದಲಾವಣೆಗಳನ್ನು ಗ್ರಹಿಸಲು ಆಂಟೆನಾಗಳು ಮುಖ್ಯವಾಗಿದೆ. ಉದಾಹರಣೆಗೆ ಕೆಲವು ಕೀಟಗಳು ಗಾಳಿಯ ದಿಕ್ಕಿನಲ್ಲಿ ಬದಲಾವಣೆಗಳನ್ನು ಪತ್ತೆಹಚ್ಚಲು ಅಥವಾ ತಾಪಮಾನದಲ್ಲಿನ ಬದಲಾವಣೆಗಳನ್ನು ಗ್ರಹಿಸಲು ತಮ್ಮ ಆಂಟೆನಾಗಳನ್ನು ಬಳಸುತ್ತವೆ. ಸೊಳ್ಳೆಗಳಂತಹ ಕೆಲವು ಕೀಟಗಳು ಗಾಳಿಯಲ್ಲಿ ಕಾರ್ಬನ್ ಡೈಆಕ್ಸೈಡ್ ಇರುವಿಕೆಯನ್ನು ಪತ್ತೆಹಚ್ಚಲು ತಮ್ಮ ಆಂಟೆನಾಗಳನ್ನು ಬಳಸುತ್ತವೆ. ಇದು ಬಿಸಿರಕ್ತದ ಪ್ರಾಣಿಗಳ ಉಪಸ್ಥಿತಿಯ ಸಾಮಾನ್ಯ ಸೂಚಕವಾಗಿದೆ. ಒಟ್ಟಾರೆಯಾಗಿ ಕೀಟ ಪ್ರಭೇದಗಳ ಉಳಿವಿಗಾಗಿ ಆಂಟೆನಾಗಳು ಅವಶ್ಯಕವಾಗಿವೆ.

# ಚೆಸ್ ಗ್ರಾಂಡ್ ಮಾಸ್ಟರ್ ಸ್ಟ್ಯಾನಿ

ಸ್ಟ್ಯಾನಿ 22 ಜನವರಿ 1993 ರಂದು ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಜನಿಸಿದರು. ತಂದೆ ದಿ-ಆಂಟನಿ ಜ್ಞಾನ ಪ್ರಕಾಶ್ ಮತ್ತು ಲಿಜಿ ಆಂಥೋನಿ ಅವರ 2ನೇ ಪುತ್ರ.

ಸ್ಟ್ಯಾನಿ 8ನೇ ವಯಸ್ಸಿನಲ್ಲಿ ಚೆಸ್ ಆರಂಭಿಸಿದರು. ಅಣ್ಣ ಟೋನಿಗೆ ಆಟದ ಮೂಲ ನಿಯಮಗಳನ್ನು ಹೇಳಿಕೊಡುತ್ತಿದ್ದ ಚಿಕ್ಕಪ್ಪನನ್ನು ಗಮನಿಸಿ ಆಟದ ನಿಯಮಗಳನ್ನು ಕಲಿತರು. ಚೆಸ್‌ನಲ್ಲಿ ಅವರ ಆಸಕ್ತಿಯನ್ನು ಕಂಡು, ಅವರ ಪೋಷಕರು ಅವರನ್ನು ಶಿವಮೊಗ್ಗದ ನಳಂದ ಚೆಸ್ ಅಕಾಡೆಮಿಯ ಶ್ರೀ ಕೃಷ್ಣ ಉಡುಪ ಅವರ ಬಳಿಗೆ ಕರೆದೊಯ್ದರು ಇವರೆ ಅವರ ಮೊದಲ ತರಬೇತುದಾರರು.

ಕೆಲವು ವರ್ಷಗಳ ಕಾಲ ಉಡುಪ ಅವರ ನಿಯಮಿತ ತರಬೇತಿಯೊಂದಿಗೆ ಸ್ಟ್ಯಾನಿ ಕರ್ನಾಟಕದಲ್ಲಿ ವಿವಿಧ ವಯೋಮಿತಿಯ ಪಂದ್ಯಗಳಲ್ಲಿ ವಿಜೇತರಾಗಿದ್ದಾರೆ.

2009 ರಲ್ಲಿ 16 ನೇ ವಯಸ್ಸಿನಲ್ಲಿ, ಅವರು ಕರ್ನಾಟಕ ರಾಜ್ಯ ಸೀನಿಯರ್ ಚೆಸ್ ಚಾಂಪಿಯನ್ಶಿಪ್ ನಲ್ಲಿ ಪದಕ ಗಳಿಸಿದರು ವರ್ಷದ ಅತ್ಯಂತ ಕಿರಿಯ ರಾಜ್ಯ ಹಿರಿಯ ಚಾಂಪಿಯನ್ ಎಂಬ ದಾಖಲೆಯನ್ನು ರಚಿಸಿದರು.

2011 ರಲ್ಲಿ ಜಮ್ಮುವಿನಲ್ಲಿ ರಾಷ್ಟ್ರೀಯ ಯು-17 ಚಾಂಪಿಯನ್‌ಶಿಪ್ ಗೆದ್ದಾಗ ರಾಷ್ಟ್ರೀಯ ಮಟ್ಟದಲ್ಲಿ ಅವರ ಯಶಸ್ಸು ಪ್ರಾರಂಭವಾಯಿತು.

ಏಷ್ಯನ್ ಮತ್ತು ವಿಶ್ವ ಯೂತ್ ಚಾಂಪಿಯನ್‌ಶಿಪ್ 2011 ಗೆ ಅರ್ಹತೆ ಪಡೆದರು.

ಫಿಲಿಪೈನ್ಸ್‌ನಲ್ಲಿ ನಡೆದ ಏಷ್ಯನ್ ಯು-18 ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದರು ಮತ್ತು ವಿಶ್ವ ಯು-18 ಚಾಂಪಿಯನ್‌ಶಿಪ್‌ನಲ್ಲಿ ಫೆಡೋಸೀವ್ ವ್ಲಾಡಿಮಿರ್ ಮತ್ತು ದೇಬಾಶಿಶ್ ದಾಸ್ ಅವರೊಂದಿಗೆ ಎರಡನೇ ಸ್ಥಾನವನ್ನು ಪಡೆದರು ಆದರೆ ಟೈಬ್ರೇಕ್‌ನಿಂದಾಗಿ ನಾಲ್ಕನೇ ಸ್ಥಾನ ಪಡೆದರು.

ಸ್ಟಾನಿ 2010 ರಲ್ಲಿ ರಾಷ್ಟ್ರೀಯ ಪ್ರೀಮಿಯರ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ತನ್ನ ಮೊದಲ ಅಂತರರಾಷ್ಟ್ರೀಯ ಮಾಸ್ಟರ್ ರೂಢಿಯನ್ನು ಮಾಡಿದರು,ಒಡಿಶಾ ಗ್ರಾಂಡ್ ಮಾಸ್ಟರ್ ಇಂಟರ್ನ್ಯಾಷನಲ್ ಓಪನ್ 2011 ನಲ್ಲಿ ಎರಡನೆಯದು ಮತ್ತು ರೆಥಿಮ್ನೋ ಇಂಟರ್ನ್ಯಾಷನಲ್ ಓಪನ್ ಗ್ರೀಸ್‌ನಲ್ಲಿ ಅಂತಿಮ ಪಂದ್ಯ ಆಡಿದರು.

2012 ರಲ್ಲಿ ಫಿಡೆ ನಿಂದ ಅಂತರರಾಷ್ಟ್ರೀಯ ಮಾಸ್ಟರ್ ಪ್ರಶಸ್ತಿಯನ್ನು ಪಡೆದರು. 19ನೇ ವಯಸ್ಸಿನಲ್ಲಿ ಕರ್ನಾಟಕದ ಕಿರಿಯ ಇಂಡಿಯನ್ ಮಾಸ್ಟರ್ ದಾಖಲೆಯನ್ನು ಮತ್ತೊಮ್ಮೆ ರಚಿಸಿದರು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಇಂಟರ್ನ್ಯಾಷನಲ್ ಮಾಸ್ಟರ್ ಆದ ನಂತರ, ಸ್ಟ್ಯಾನಿ ಅನೇಕ ಯುರೋಪಿಯನ್ ಪಂದ್ಯಾವಳಿಗಳಲ್ಲಿ ಆಡಲು ಪ್ರಾರಂಭಿಸಿದರು.

2015 ರಲ್ಲಿ ಅವರು ಚೆನ್ನೈನ ಐಎಂ ವಿ ಸರವಣನ್ ಅವರೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿದರು ಅದು ಉತ್ತಮ ಯಶಸ್ಸನ್ನು ಕಂಡಿತು.





2015-2016 ರ ಸುಮಾರಿಗೆ ಫ್ರೆಂಚ್ ಇಂಟರ್ನ್ಯಾಷನಲ್ ಓಪನ್ ಗಳಲ್ಲಿ ಸ್ಟಾನಿ ಬ್ಯಾಕ್ ಟು ಬ್ಯಾಕ್ ಯಶಸ್ಸನ್ನು ಹೊಂದಿದ್ದರು.

ಫ್ರಾನ್ಸ್ 2015 ರಲ್ಲಿ 1 ನೇ ಲಿಫ್ರೆ ಓಪನ್ ಅನ್ನು ಗೆದ್ದರು.

ಅವರು ಮುಂಬೈ 2016 ರ ಪ್ರಸಿದ್ಧ ಐ.ಐ.ಎಫ್.ಎಲ್. ಇಂಟರ್ನ್ಯಾಷನಲ್ ಓಪನ್ ಟೂರ್ನಮೆಂಟ್‌ನ ಮೊದಲ ಆವೃತ್ತಿಯಲ್ಲಿ ರನ್ನರ್ ಅಪ್ ಆಗಿದ್ದರು.

ಎಲ್.ಯು.ಸಿ.ಓಪನ್‌ನಲ್ಲಿ ತಮ್ಮ ಮೊದಲ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಅನ್ನು ಪಡೆದರು, ಫ್ರಾನ್ಸ್ ಅಲ್ಲಿ ಅವರು ಅನೇಕ ಗ್ರಾಂಡ್ ಮಾಸ್ಟರ್ ಗಳ ಮುಂದೆ 2 ನೇ ಸ್ಥಾನ ಪಡೆದರು.

ಪ್ಯಾರಿಸ್‌ನಲ್ಲಿ ಮಲಕಾಫ್ ಓಪನ್ 2016 ಅನ್ನು ಅಗ್ರ ಶ್ರೇಯಾಂಕದ ದಂತಕಥೆ ಎವ್ಗೆನಿ ಸ್ವೆಶ್ನಿಕೋವ್ ಅವರಿಗಿಂತ ಮುಂಚಿತವಾಗಿ ಗೆದ್ದರು.

ಅದೇ ವರ್ಷ ಅವರು ಫ್ರಾನ್ಸ್ 2016 ರ ಸೌಟ್ರಾನ್ ಓಪನ್ ಅನ್ನು ಗೆದ್ದರು.

2017 ವರ್ಷವು ಸ್ಟ್ಯಾನಿಗೆ ಅತ್ಯಂತ ಯಶಸ್ವಿಯಾಗಿದೆ ಏಕೆಂದರೆ ಅವರು ಸ್ಥಿರವಾಗಿ ಪ್ರದರ್ಶನ ನೀಡಲು ಪ್ರಾರಂಭಿಸಿದರು ಮತ್ತು ಅನೇಕ ಯುರೋಪಿಯನ್ ಗ್ರ್ಯಾಂಡ್‌ಮಾಸ್ಟರ್ ಪಂದ್ಯಾವಳಿಗಳಲ್ಲಿ ಅಗ್ರ 3 ರಲ್ಲಿ ಸ್ಥಾನ ಪಡೆದರು.

ಜನವರಿಯಲ್ಲಿ ಸ್ಟಾನಿ ಅವರು ಸ್ಪೇನ್‌ನ ಸೆವಿಲ್ಲೆ ಓಪನ್‌ನಲ್ಲಿ 3 ನೇ ಸ್ಥಾನ ಪಡೆದಾಗ 2500 ಫಿಡೆ ಎಲೋವನ್ನು ದಾಟಿದರು.

ಅವರು ಇಟಲಿಯಲ್ಲಿ ತಮ್ಮ ಮೊದಲ ಪಂದ್ಯಾವಳಿಯಾದ ಫೋರ್ನಿ ಡಿ ಸೋಪ್ರಾ ಓಪನ್ 2017 ಅನ್ನು ಆಡಿದರು ಮತ್ತು ಪಂದ್ಯಾವಳಿಯ ನಾಯಕ ಈಕ್ವೆಡಾರ್‌ನ ಗ್ರಾಂಡ್ ಮಾಸ್ಟರ್ ಫ್ರಾಂಕೊ ಮ್ಯಾಟಮೊರೊಸ್ ಅವರನ್ನು ಬ್ಲ್ಯಾಕ್‌ನೊಂದಿಗೆ ಕೊನೆಯ ಸುತ್ತಿನಲ್ಲಿ ಸೋಲಿಸಿ ಪ್ರಶಸ್ತಿಯನ್ನು ಗೆದ್ದ ನಂತರ ಎಲ್ಲರನ್ನು ಅಚ್ಚರಿಗೊಳಿಸಿದರು.

ಗ್ರಾಸ್ ಓಪನ್ ಸ್ಪೇನ್ 2017 ರಲ್ಲಿ 2 ನೇ ಸ್ಥಾನ ಪಡೆದರು. ಅವರು ಸ್ಟಾವಂಜರ್ ಓಪನ್ 2017 ನಾರ್ವೆಯಲ್ಲಿ ಆಡಿದರು ಮತ್ತು 3 ನೇ ಸ್ಥಾನ ಪಡೆದರು.

ಸೌಟ್ರಾನ್ ಇಂಟರ್‌ನ್ಯಾಶನಲ್ ಓಪನ್ 2017 ರಲ್ಲಿ ತಮ್ಮ ಪ್ರಶಸ್ತಿಯನ್ನು ಯಶಸ್ವಿಯಾಗಿ ಸಮರ್ಥಿಸಿಕೊಂಡರು ಮತ್ತು ಪಂದ್ಯಾವಳಿಯನ್ನು ಉಳಿದಿರುವ ಒಂದು ಸುತ್ತಿನಲ್ಲಿ ಗೆದ್ದರು ಅವರ ಯಶಸ್ವಿ ಪ್ರವಾಸದಿಂದ ಭಾರತಕ್ಕೆ ಹಿಂದಿರುಗಿದ ಸ್ವಲ್ಪ ಸಮಯದ ನಂತರ ಸ್ಟ್ಯಾನಿ ಅವರ ತಂದೆ ಹೃದಯಾಘಾತದಿಂದ ನಿಧನರಾದ ಕಾರಣ ವೈಯಕ್ತಿಕ ದುರಂತವನ್ನು ಎದುರಿಸಬೇಕಾಯಿತು.

ಸ್ಟಾನಿ ನಂತರ "ತನ್ನ ತಂದೆ ಜೀವಂತವಾಗಿದ್ದಾಗ ಗ್ರಾಂಡ್ ಮಾಸ್ಟರ್ ಆಗಲು ಸಾಧ್ಯವಾಗಲಿಲ್ಲ ಎಂಬುದೇ ಅವರ ಬೇಸರವಾಗಿದೆ.

ಸ್ಟಾನಿ ಯುಕೆಯಲ್ಲಿನ ಪ್ರತಿಷ್ಠಿತ ಹೇಸ್ಟಿಂಗ್ಸ್ ಮಾಸ್ಟರ್ಸ್‌ನಲ್ಲಿ 2 ನೇ ರನ್ನರ್ ಅಪ್ ಅನ್ನು ಮುಗಿಸುವ ಮೂಲಕ 2018 ಅನ್ನು ಪ್ರಾರಂಭಿಸಿದರು.

ಗುಜರಾತ್ ಇಂಟರ್‌ನ್ಯಾಶನಲ್ ಓಪನ್‌ನಲ್ಲಿ ಮೂರನೇ ಸ್ಥಾನ ಗಳಿಸಿದರು, ಅಲ್ಲಿ ಸ್ಟ್ಯಾನಿ 7/7 ಅಂಕಗಳನ್ನು ಗಳಿಸುವ ಮೂಲಕ ಮುಖ್ಯಾಂಶಗಳನ್ನು ಮಾಡಿದರು ಇದರಲ್ಲಿ ಅವರು ಪಂದ್ಯಾವಳಿಯ ಅಗ್ರ ಶ್ರೇಯಾಂಕದ ಉಕ್ರೇನ್‌ನ ಜಿಎಂ ಕ್ರಾವ್ಟ್ಸಿವ್ ಮಾರ್ಟಿನ್ ಅವರನ್ನು ಸುತ್ತಿನಲ್ಲಿ 7 ರಲ್ಲಿ ಸೋಲಿಸಿದರು. ಆ ಮೂಲಕ ಅವರು ತಮ್ಮ 2 ನೇ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಅನ್ನು ಎರಡು ಸುತ್ತುಗಳು ಬಾಕಿಯಿರುವಂತೆ ಪಡೆದರು. ಅಂತಿಮ ಪಂದ್ಯಾವಳಿಯಲ್ಲಿ ಮೂರನೇ ಸ್ಥಾನ ಪಡೆದರು.

ಸ್ಟ್ಯಾನಿ ಡಿಸೆಂಬರ್ 2018 ರಲ್ಲಿ ಜಮ್ಮುವಿನಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ತಮ್ಮ ಉತ್ತಮ ಫಾರ್ಮ್ ಅನ್ನು ಮುಂದುವರೆಸಿದರು ಮತ್ತು ತಮಿಳುನಾಡಿನ ಗ್ರಾಂಡ್ ಮಾಸ್ಟರ್ ಅರವಿಂದ್ ಚಿತ್ತಂಬರಂ ವಿರುದ್ಧ ಡ್ರಾ ಮಾಡುವ ಮೂಲಕ ತಮ್ಮ ಮೂರನೇ ಮತ್ತು ಅಂತಿಮ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಅನ್ನು 9 ನೇ ಸುತ್ತಿನಲ್ಲಿ ಗಳಿಸಿದರು ಮತ್ತು ಆ ಮೂಲಕ ಅವರ ಗ್ರ್ಯಾಂಡ್‌ಮಾಸ್ಟರ್ ಪ್ರಶಸ್ತಿಯ ಅವಶ್ಯಕತೆಗಳನ್ನು ಪೂರ್ಣಗೊಳಿಸಿದರು. ಹಾಗೆ ಮಾಡುವ ಮೂಲಕ ಅವರು ಭಾರತದ 58 ನೇ ಮತ್ತು ಕರ್ನಾಟಕದ ಎರಡನೇ ಗ್ರಾಂಡ್ ಮಾಸ್ಟರ್ ಆದರು.

ಚೆಸ್ ಎಂದರೆ ಇಂಜುರಿ ಲೆಸ್ ಗೇಮ್ ಹಾಗಾಗಿ ಯಾವುದೇ ಚಿಂತೆಗಿಡಾಗದೆ ಫೋಕಸ್ ಮಾಡಿ ಆಡುತ್ತಿದ್ದೆ ಇದು ಓದಿನಲ್ಲಿ ಏಕಾಗ್ರತೆಯನ್ನು ಹೆಚ್ಚಿಸಲು ಅನುಕೂಲವಾಯಿತು ಪೋಷಕರು ತುಂಬಾ ಸಹಕಾರವನ್ನು ನೀಡಿದ್ದಲ್ಲದೆ ನನ್ನ ವಿದ್ಯಾಭ್ಯಾಸದ ಕಡೆಗೆ ಅವರೆಂದು ಚಿಂತೆ ಮಾಡದೆ ಪ್ರೋತ್ಸಾಹ ನೀಡುತ್ತಿದ್ದರು ಅಪ್ಪ-ಅಮ್ಮ ನನ್ನ 15ನೇ ವಯಸ್ಸಿನ ವರವಿಗೂ ಕ್ರೀಡಾಕೂಟ ನಡೆಯುವ ಸ್ಥಳಗಳಿಗೆ ಬರುತ್ತಿದ್ದರು.

ಚೆಸ್ ಭಾರತದಲ್ಲಿ ಬೆಳೆದಿದೆ ಜನರಿಗೆ, ಆಟ ತಲುಪುತ್ತಿದೆ,ಕರೋನ ನಂತರ ಹೆಚ್ಚು ಬೆಳವಣಿಗೆಯಾಗಿದೆ ಜನರು ಈ ಕ್ರೀಡೆಯನ್ನು ಹೆಚ್ಚು ನೋಡಲಾರಂಬಿಸಿದ್ದಾರೆ ಒಲಿಂಪಿಯಾಡ್ ಯೋಜನೆ ಮಾಡಿದ ಹಿನ್ನೆಲೆಯಲ್ಲಿ ಚೆಸ್ ಬೆಳವಣಿಗೆ ಹೆಚ್ಚಿದೆ.

ಸರ್ಕಾರ ಸಹಕಾರ ನೀಡುತ್ತಿದೆ,ಚೆಸ್ ಶಾಲೆಗಳನ್ನು ಆರಂಭಿಸಬೇಕು ಹಾಗೂ ಪಠ್ಯದಲ್ಲಿ ಯೋಗಾಸನದಂತೆ ಇದನ್ನು ಅಳವಡಿಸಿ ಪಂದ್ಯಾವಳಿಗಳನ್ನು ಏರ್ಪಡಿಸಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ.

ಶ್ರೀಯುತರ ಕ್ರೀಡಾ ಸಾಧನೆಗಳನ್ನು ಪರಿಗಣಿಸಿ ಹಲವಾರು ಸಂಘ ಸಂಸ್ಥೆಗಳು ಕರೆದು ಗೌರವಿಸಿದ್ದಾರೆ ಕರ್ನಾಟಕ ಸರ್ಕಾರ 2012 ರಲ್ಲಿ ಏಕಲವ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**- ಜಾಹೀರಾತು ವ್ಯವಸ್ಥಾಪಕರು.**

# ಗುರುವಂದನಾ, ಸ್ನೇಹ ಸಮ್ಮಿಲನ ಈಗ ಟ್ರೆಂಡಿ!

### ಭವಿಷ್ಯಕ್ಕೆ ಅಡಿಪಾಯ ಹಾಕಿದ ಶಿಕ್ಷಕರಿಗೆ ವಿದ್ಯಾರ್ಥಿಗಳು ಗೌರವ ಸೂಚಿಸುವುದು ನಮ್ಮೆಲ್ಲರ ಕರ್ತವ್ಯ

### ಹೊಸ ಶೈಲಿ ಪಡೆದ ಗುರುವಂದನೆ ಕಾರ್ಯಕ್ರಮಗಳು | ಮರುಕಳಿಸುವ ಬಾಲ್ಯದ ಸ್ನೇಹ, ಸವಿನೆನಪು

ಬಾಲ್ಯದಲ್ಲಿ ಆಟ ಪಾಠದ ಜೊತೆಗೆ ತುಂಟಾಟ ಮಾಡಿದವರೆಲ್ಲಾ ಬರೋಬ್ಬರಿ 26 ವರ್ಷಗಳ ಬಳಿಕ ಒಂದಡೆ ಸೇರುವುದು ಸ್ನೇಹ ಸಮ್ಮಿಲನ ಕಾರ್ಯಕ್ರಮ. ಸ್ನೇಹ ಅಂದರೆ ಎಲ್ಲೊ ಹುಟ್ಟಿ ಎಲ್ಲೊ ಬೆಳೆದು ಬಂದ ಬಳ್ಳಿಯಂತೆ, ಪ್ರೀತಿ, ಹರಟೆ, ಕಾವ್ಯಗಳ ಮಾತು, ಕಣ್ಣುಗಳಲ್ಲಿ ಪ್ರತಿಯೊಬ್ಬರ ನೋವನ್ನು ಅರ್ಥೈಸಿಕೊಳ್ಳುವ ಗೆಳತನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸಿಕ್ಕಿರುತ್ತದೆ. ಎಲ್ಲಾರ ಸಮಾಧಾನದ ಮಾತಿಂದ ಸ್ವಲ್ಪ ನಕ್ಕು, ಮತ್ತೆ ನಮ್ಮದೆ ಪ್ರಪಂಚಕ್ಕೆ ಹೊಂದಿಕೊಂಡು ಸಾಗುತ್ತಿರುವ ಪಯಣವಾಗಿರುತ್ತದೆ. ಸ್ನೇಹ ಅನ್ನುವುದರಲ್ಲಿ ತಮ್ಮೆಲ್ಲ ನೋವಿನಲ್ಲೂ, ನೊಂದ ಮನಸ್ಸಿಗೆ ಸಮಾಧಾನ ಹೇಳುವ ಪರಿ ಇದೆ. ಗೆಳಯರ ತಪ್ಪುಗಳನ್ನು ಗುರುತಿಸಿ ಬುದ್ಧಿ ಹೇಳುತಾ, ಅತ್ತಾಗ ಜೊತೆಗೂಡಿ ಅತ್ತು, ಸಮಾಧಾನ ಹೇಳಿ ನಕ್ಕಾಗ ಅವರೊಡನೆ ನಕ್ಕು, ಎಲ್ಲಾರ ನೋವು ನಲಿವಿನಲು ಜೊತೆ ಇದ್ದ ಪವಿತ್ರವಾದ ಬಂಧ ಈ ಸ್ನೇಹ ಸಂಬಂಧ. ಈ ಸ್ನೇಹ ಸಂಬಂಧ ಒಂದು ಹಂತಕ್ಕೆ ನಿಂತು ಹೋಗದೆ ನಿರಂತರವಾಗಿ ಹರಿಯುವ ನೀರಂತೆ. ಸ್ನೇಹ ಒಂದು ಕಡೆ ಆದರೆ ನಮಗೆ ಪಾಠ ಕಲಿಸಿದಂತಾ ಗುರುಗಳು ಇನ್ನೊಂದುಕಡೆ. ಒಂದು ನಾಣ್ಯದ ಎರಡು ಮುಖ ಇವರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಕಲಿಸಿದ ಗುರುಗಳನ್ನು ನಾವು ಜೀವನ ಪರ್ಯಂತ ಮರೆಯಲು ಸಾಧ್ಯವಿಲ್ಲ.



ಡಾ.ಸುಮಲತ ಬಿ.ಎಂ.
ಲೇಖಕರು, ಹೊಸಪೇಟೆ

Hampi Times E-paper
SCAN AND READ

ಗುರುಬ್ರಹ್ಮ ಗುರುವಿಷ್ಣು ಗುರುದೇವ ಮಹೇಶ್ವರಃ ಎಂದು ತ್ರೀಮೂರ್ತಿಗಳಿಗೆ ಗುರುಗಳನ್ನು ನಾವು ಹೊಲಿಸುತ್ತವೆ ಏಕೆಂದರೆ, ಗುರುಗಳಿಗೆ ಆ ದೇವರಿಗಿಂತ ದೊಡ್ಡ ಸ್ಥಾನವನ್ನು ನಾವು ಕೊಟ್ಟಿದ್ದೇವೆ. ಸುಮಾರು 26 ವರ್ಷಗಳ ಬಳಿಕ ಗುರು-ಶಿಷ್ಯರು ಒಂದುಕಡೆ ಸೇರಿ ಹಳೆಯ ದಿನಗಳನ್ನು ಮೆಲುಕು ಹಾಕುವುದು. ಅಲ್ಲದೇ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ಸಂತಸಪಡುವುದು.ತಮ್ಮ ಶಾಲಾ ದಿನಗಳನ್ನು ನೆನೆದು



ಬಾವುಕರರಾಗುವುದು. ಶಾಲೆಯ ಕುರಿತಾತ ಹಳೆಯ ಪೋಟೋಗಳನ್ನು ನೋಡಿ ಸವಿ ನೆನಪುಗಳನ್ನು ಮೆಲುಕು ಹಾಕುವುದು.

ಭವಿಷ್ಯಕ್ಕೆ ಅಡಿಪಾಯ ಹಾಕಿದ ಶಿಕ್ಷಕರ ಕಾರ್ಯವನ್ನು ವಿದ್ಯಾರ್ಥಿಗಳು ಭಕ್ತಿಪೂರ್ವಕವಾಗಿ ನೆನೆಯುವುದು, ಅವರಿಗೆ ಗೌರವ ಸೂಚಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಹಾಗೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿ ಕ್ರೀಡೆಗಳನ್ನು ಆಟವಾಡಿ ಸಂತಸ ಪಡುವುದು. ಇದೆಲ್ಲ ಕಾರ್ಯಕ್ರಮಗಳಲ್ಲಿ ನೆಡೆಯುವುದು ಈಗ ನಿಜಕ್ಕೂ ಅವಿಸ್ಮರಣಿಯ.

**"ಗುರುವಿನ ಗುಲಾಮನಾಗುವ ತನಕದೊರೆಯದಣ್ಣ ಮುಕುತಿ"** ಎನ್ನುವ ಪುರಂದರದಾಸರು ಹೇಳಿದ ಹಾಗೆ ನಾವು ಶಿಕ್ಷಣ ಮುಗಿಸುವವರೆಗೆ ಮಾತ್ರ ಗುಲಾಮರಾಗುವುದಲ್ಲ, ಜೀವನ ಪರ್ಯಂತ ಅವರಕೊಟ್ಟ ಶಿಕ್ಷಣ ಮಾರ್ಗದರ್ಶನ ಮರೆಯಬಾರದು ಮರೆತು ನಡೆದರೆ ನಮಗೆ ಮುಕ್ತಿ ಸಿಗುವುದಿಲ್ಲ. ಹಾಗೆ ಬುನಾದಿ ಸರಿಇದ್ದರೆ ಮನೆ ಗಟ್ಟಿಯಾಗಿರುವಂತೆ, ಬಾಲ್ಯದಲ್ಲಿ ಪಡೆದ ಶಿಕ್ಷಣ ಕೊನೆಯವರೆಗು ಅದು ಕಾಪಾಡಿಕೊಂಡು ಬರುತ್ತದೆ. ಗುರುವಂದನಾ ಕಾರ್ಯಕ್ರಮ ಮಾಡಿ ಒಂದು ದಿನ ಸನ್ಮಾನ ಮಾಡಿ ಅವರನ್ನು ಹಾಡಿ ಹೊಗಳಿದರೆ ಸಾಲದು ನಮ್ಮ ಜೀವ ಇರುವವರಿಗೂ ಅವರನ್ನು ಗೌವರಿಸಬೇಕು. ಪ್ರತಿಯೊಬ್ಬರ ಬದುಕಿನಲ್ಲೂ ಗುರು ಇಲ್ಲದೆ ಏನೂ ಸಾಧ್ಯವಿಲ್ಲ. ಗುರು ಎಂದರೆ ಅಜ್ಞಾನವೆಂಬ ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಮಹಾನ್‌ಚೇತನ. ಆ ಬೆಳಕನ್ನು ದಿನವಿಡಿ ಗೌರವಿಸೋಣ.

ಸ್ನೇಹಿತರನ್ನು 28 ವರ್ಷದ ಬಳಿಕ ಬೇಟಿ ಮಾಡುವುದು ಒಂದುರೋಮಾನಂಚನಾರಿ ವಿಷಯ. ಅವರ ಮುಖ ಪರಿಚಯ ಇಲ್ಲದೆ, ಅವರು ಎಲ್ಲಿ ಇದ್ದಾರೆ ಹೇಗೆ ಇದ್ದಾರೆ ಒಂದು ಗೊತ್ತಿರುವುದಿಲ್ಲ ಆ ದಿನ ಬೇಟಿ ಮಾಡಿದಾಗ ಅವರನ್ನು ನೋಡುವುದು, ಮಾತನಾಡುವುದು ಕುತೂಹಲಕಾರಿ ಆಗಿರುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ, ಬೇರೆ ಬೇರೆ ದೇಶಗಳಲ್ಲಿ ಇರುವ ಸ್ನೇಹಿತರು ಬಂದು ಸೇರುವ ಸ್ನೇಹ ಸಮ್ಮಿಲನ ನಿಜಕ್ಕೂ ಮನ ಸಂತಸ ಪಡಿಸುವಕ್ಷಣ.ಹೇಗಿದ್ದವರು ಈಗ ನೋಡಿದರೆ ಅವರನ್ನು ಗೊತ್ತು ಇಡಿಯಲು ಸಾಧ್ಯವಾಗದ ಸ್ನೇಹಿತರನ್ನು ಬೇಟಿ ಮಾಡುವುದು ಸುಂದರಕ್ಷಣ.ಎಲ್ಲಾ ಸ್ನೇಹಿತರನ್ನು ಬೇಟಿ ಮಾಡಿಸುವ ಕಾರ್ಯಕ್ರಮ ಮಾಡುವುದು ಸುಲಭದ ಮಾತಲ್ಲ ಅದಕ್ಕೆ ಹರ ಸಾಹಸ ಪಡಬೇಕು ಏಕೆಂದರೆ ಒಬ್ಬಬ್ಬೊರು ಒಂದೊಂದು ಊರುಗಳಲ್ಲಿ ಇರುತ್ತಾರೆ, ಈಗಿನ ಒತ್ತಡದ ಕೆಲಸಗಳು, ಒಬ್ಬರಿಗೆ ರಜ ಇದ್ದರೆ ಇನ್ನೋಬರಿಗೆ ರಜಾ ಇರುವುದಿಲ್ಲ, ಎಲ್ಲರೂ ಒಂದೇತರ ಕೆಲಸ ಮಾಡುವವರಲ್ಲ ಅವರ ಬಿಡುವು ಸಮಯ ನೋಡಿಕೊಂಡು ಅನೂಕೂಲಕ್ಕೆ ತಕ್ಕಂತೆ ಒಂದು ದಿನ ಕಾರ್ಯಕ್ರಮ ಆಯೋಜನೆ ಮಾಡಬೇಕಾಗುತ್ತದೆ. ಹಾಗೆ ನಮಗೆ ಪಾಠ ಮಾಡಿದ ಗುರುಗಳ ಬಗ್ಗೆ ತಿಳಿದು ಕೊಂಡು ಅವರನ್ನು ಸಂಪರ್ಕಿಸಿ ಅವರ ಅನುಮತಿ ಪಡೆಯಬೇಕಾಗುತ್ತದೆ. ಇದೆಲ್ಲ ಎಲ್ಲಾ ಸ್ನೇಹಿತರು ಸೇರಿ ಮಾಡಿದಾಗ ಒಂದು ಅರ್ಥಪೂರ್ಣ ಕಾರ್ಯಕ್ರಮ ನಡೆಯುತ್ತದೆ.

ಇತ್ತೀಚಿಗೆ ಈ ಕಾರ್ಯಕ್ರಮಗಳು ಪ್ರತಿಯೊಂದು ಊರುಗಳಲ್ಲಿ ನೆಡೆಯುತ್ತಿವೆ. ಹೊರ ದೇಶಗಳಲ್ಲಿ ನಮ್ಮ ಭಾರತೀಯರು ಕೂಡ ಗುರುವಂದನಾ ಕಾರ್ಯಕ್ರಮ ಮಾಡುತ್ತಾರೆ. ಮದುವೆ ಸಮಾರಂಭಗಳ ತರ ಒಂದು ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ಮಾಡುತ್ತಾರೆ. ಯಾಕೆ ಇವು ಇದ್ದಕ್ಕಿಂದ್ದಂತೆ ಇಷ್ಟೊಂದು ಟ್ರೆಂಡಿ ಆಗುತ್ತಿವೆ ಎಂದು ಪ್ರಶ್ನೇ ಮಾಡಿಕೊಂಡರೆ? ಈಗಿನ ಒತ್ತಡದ ಬದುಕಿಗೆ, ಒತ್ತಡದ ಕೆಲಸಗಳಿಗೆ ಒಂದು ಬ್ರೇಕ್ ಬೇಕಿದೆ. ನಮ್ಮ ಜೀವನ ಶೈಲಿ ಬದಲಾಗಬೇಕಿದೆ ಒಂದು ದಿನ ನಮ್ಮ ಜೀವನಕ್ಕೆ ಸಂತೋಷದ ದಿನ ಆಗಬೇಕಿದೆ. ಅದು ಇಂತಹ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯ. ಸ್ನೇಹ ಮತ್ತು ಗುರು ಈ ಇಬ್ಬರು ನಮ್ಮ ಹೃದಯ ಇದ್ದ ಹಾಗೆ ನೆಮ್ಮದಿ ಜೀವನದ ಹಾದಿಗೆ ಇವರೇ ಬೆಳಕು. ಬಾಲ್ಯದ ಸ್ನೇಹ ಆಟ ಪಾಠ ಮತ್ತೆ ಮರಳಿ ಬಾರದು ಅದು ಸವಿನೆನಪು ಮಾತ್ರ. ಆ ಸವಿನೆನಪುಗಳನ್ನು ಮೆಲುಕು ಹಾಕುವುದೇ ಈ ರೀತಿ ಕಾರ್ಯಕ್ರಮಗಳು. ಈ ಕಾರ್ಯಕ್ರಮಗಳು ವರ್ಷದಿಂದ ವರ್ಷಕ್ಕೆ ಇನ್ನು ಹೆಚ್ಚಿನ ಮಟ್ಟದಲ್ಲಿ ನೆಡೆಯಬೇಕಿವೆ.

ಕವಿ ಮನಸು

## ಅನಾಥ



ಹಸಿವಿನಿಂದ ಬಳಲಿರುವೆ
ಬಾಯಾರಿಕೆಯಿಂದ ಬೆಂಡಾಗಿರುವೆ
ನಿಲ್ಲಲು ಶಕ್ತಿ ಇಲ್ಲ ನನಗೆ
ಸಹಾಯವ ಮಾಡಿರಿ ಈ ಅನಾಥನಿಗೆ

ತುತ್ತು ಅನ್ನಕ್ಕೂ ಪರದಾಡುತ್ತಿರುವೆ
ಸೂರಿಲ್ಲದೆ ರಸ್ತೆಯಲ್ಲೇ ಮಲಗುವೆ
ತೊಡಲು ಬಟ್ಟೆಯೂ ಇಲ್ಲದಾಗಿದೆ
ಬಿಸಿಲ ಧಗೆಗೆ ಬಾಯಿ ಒಣಗಿದೆ

ಮನುಷ್ಯತ್ವಕ್ಕೆ ಬಣ್ಣದ ಭೇದವಿಲ್ಲ
ತಾಯಿಯ ಮಮತೆಗೆ ಕೊನೆಯಿಲ್ಲ
ಭಾಷೆ ದೇಶ ತಿಳಿದಿಲ್ಲ
ನಮ್ಮಿಬ್ಬರಿಗೂ ಸಂಬಂಧವೇ ಇಲ್ಲ

ಆದರೂ ನೀರನ್ನು ಕುಡಿಸುತಾ
ತಿನ್ನಲು ಆಹಾರವ ನೀಡುತಾ
ಪ್ರಾಣವ ಉಳಿಸಿದಳು ಮಾತೆ
ಚೈತನ್ಯವ ನೀಡಿದಳು ಜೀವದಾತೆ

– ಚೇತನ ಭಾರ್ಗವ ಬೆಂಗಳೂರು

## ನಿರ್ಗತಿಕರು

ನಾವು ಹುಟ್ಟಿರೊದೆ ನಿರ್ಗತಿಕರಾಗಿ
ನಮಗಿಲ್ಲ ಯಾರು ಅನುಕಂಪದ ದಾರಿ
ನಿತ್ಯ ಚಿಂದಿ ಆಯಬೇಕು ನಡುಬಾಗಿ
ಸಿಕ್ಕಷ್ಟೇ ಆಯ್ದು ಮಾರಿ ಅದೆ ಜೀವಕ್ಕೆ ದಾರಿ।

ಬದುಕಲು ಸಿಗದು ಬದುಕಿನ ದಾರಿ
ಬೆನ್ನಟ್ಟಿ ಕಾಡುತಿಹಳು ವಿಧಿಯ ಮಾರಿ
ತುತ್ತಿನ ಚೀಲ ತುಂಬಿಸಲು ದಿನ ಅಲೆದಾಟ
ಎಷ್ಟು ಚಿಂತಿಸಿದರೂ ತಿಳಿಯದು ಜೀವದಾಟ।

ಕಸ ಹಾಕುವವರ ಕಡೆ ನಮ್ಮ ಆಸೆ ಕಣ್ಣು
ಹೆಕ್ಕಿ ಹೆಕ್ಕಿ ತೆಗೆದಾಗ ಮೈಯೆಲ್ಲ ಹಣ್ಣು
ಅರೆ ಹೊಟ್ಟೆ ಅರೆ ಬಟ್ಟೆ ಇದೇ ನಮ್ಮ ಜೀವನ
ಎಂದು ಮಾಡುವೆ ದೇವ ನಮ್ಮ ಜೀವನ
ಪಾವನ।?

ಮಳೆ ಗಾಳಿ ಛಳಿ ಬಿಸಿಲಿಗೆ ಆಸರೆ ನಮಗಿಲ್ಲ
ದೊಡ್ಡ ಪೈಪು ಸೇತುವೆಗಳೆ ನಮ್ಮ ಮನೆ
ಹೆಂಡತಿ ಮಕ್ಕಳಿಗೆ ಅದೇ ಆಶ್ರಯದ ಮನೆ
ಬಿದ್ದರು ಸತ್ತರೂ ಯಾರ ಗಮನವಿರುವುದಿಲ್ಲ।

– ಚಂದ್ರಶೇಖರಯ್ಯ ರೋಣದಮಠ

## ಮಗಳು

ಹತ್ತು ಮಕ್ಕಳ ಹಡೆಯುವ ದೇಕೆ
ಮುತ್ತಿನಂತ ಹೆಣ್ಣೊಂದು ಸಾಕೆ
ಚೊಕ್ಕ ಚಿನ್ನದಂತೆ ನಮ್ಮ ಸಂಸಾರ......1

ಹೃದಯ ತುಂಬಿ ನಗುತಾಳ
ನಗೆಯ ಹನಿ ಬೀರುತ್ತಾಳ
ಆನಂದ ಕಡಲು ನಮ್ಮ ಮನೆ...2

ಗೌರಿ ಹುಣ್ಣಿಮೆ ಬಂದರೆ ಸಾಕು
ಸುಂದರವಾದ ಸೀರೆಯ ಊಟ್ಟು
ಹೋಗುವರು ಗೌರಮ್ಮ
ಮಹಾತಾಯಿಗೆ.......3

ಓರಿಗೆ ಗೆಳತಿಯರು ಕುಡ್ಯಾರ
ಗಿಳಿಹಿಂಡು.ಸಂತೋಷ
ಸಾಗರ ಸ್ತ್ರೀಯರಿಗೆ.....4

ಸರತಿಯ ಸಾಲೂ ನಿಂತು
ಆರತಿಯನ್ನು ಬೆಳಗುವರೂ
ಚಂಡೂವ ಮುಡಿಸುವರು ಬಾಗಿಲಿಗೆ....5

ಮಹಾದೇವಿ ನೀ ಕಾಯೇ
ಸರ್ವ ಶಕ್ತಿಯ ತಾಯಿಯೇ
ಪ್ರತಿನಿತ್ಯ ನೆನೆಯುವೆ ನಿನ್ನ ನಾಮವ.......6

– ಎಸ್‌ಎಸ್ ಮುದ್ಲಾಪೂರ ಕೊಪ್ಪಳ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

**ನಿನ್ನಪ್ಪ....ನಿನ್ನಮ್ಮನಂತೆ ಮನ ಬಿಚ್ಚಿ ಮಾತನಾಡುವುದಿಲ್ಲ, ತನ್ನಂತರಂಗದ ಬೇಗುದಿಯ ಹೇಳಿಕೊಳ್ಳುವುದಿಲ್ಲ, ಪ್ರೀತಿಯನ್ನು ವ್ಯಕ್ತಪಡಿಸುವುದಿಲ್ಲ ಆದರೆ ನೀನಿಲ್ಲದ ಸಮಯದಲ್ಲಿ ಆತನ ಬಹುತೇಕ ಸಮಯ ಕಳೆಯುವುದು ನಿನ್ನ ನೆನವರಿಕೆಯಲ್ಲಿ....**

Scan For Audio

# ಮಗನಿಗೊಂದು ಪತ್ರ



**ಮುದ್ದು ಮಗನೇ,**

ಇಷ್ಟು ವರ್ಷ ಮನೆಯಲ್ಲಿ ಆಡಿ ನಲಿದು ನಮ್ಮೆಲ್ಲರನ್ನು ಸಂತಸ ಪಡಿಸಿದ, ನಿನ್ನ ಬೆಳವಣಿಗೆಯಿಂದ ಖುಷಿಯನ್ನು ಹಂಚಿದ ಕೆಲವೊಮ್ಮೆ ಗಾಬರಿ ಆತಂಕಗಳಿಗೆ ಈಡಾಗಿಸಿದ ನಿನಗೆ ಹೀಗೊಂದು ಪತ್ರ ಬರೆಯುವ ಪ್ರಮೇಯ ಬದುಕಿನಲ್ಲಿ ಬರುತ್ತದೆ ಎಂದು ಯಾವತ್ತೂ ಅಂದುಕೊಂಡಿರಲಿಲ್ಲ.

ತಾಯಿಯಾಗಿ ಬರೀ ಕಾಳಜಿ, ಪ್ರೀತಿಯ ಹೊನಲನ್ನೇ ಹರಿಸಿದ್ದೇನೆ ಎಂದು ನಾನು ಹೇಳುವುದಿಲ್ಲವಾದರೂ ಚಿಕ್ಕಂದಿನಿಂದ ನಿನ್ನಲ್ಲಿ ಕೆಲ ಮೌಲ್ಯಗಳನ್ನು ಬಿತ್ತಿದ್ದೇನೆ.ಇದೀಗ ಆ ಮೌಲ್ಯಗಳು ಬೆಳೆದು ಸಸಿಯಾಗಿ ಫಲ ಕೊಡುವ ಸಮಯ. ಬಹುಷಃ ತಾಯಿಯಾಗಿ ನನಗೆ ಮತ್ತು ಮಗನಾಗಿ ನಿನಗೆ ಇದು ಪರೀಕ್ಷೆಯ ಸಮಯ. ಫಲಹೊತ್ತು ನಿಂತಿರುವ ನಿನ್ನಲ್ಲಿನ ಗಟ್ಟಿ ಮತ್ತು ಜೊಳ್ಳು ಕಾಳುಗಳ ಮೇಲೆ ನನ್ನ ಬಿತ್ತಿ ಬೆಳೆಯುವಿಕೆಯ ಶ್ರಮ ಮತ್ತು ನಿನ್ನ ಉತ್ಪಾದಕತೆ ನಿಂತಿದೆ ಎಂದರೆ ತಪ್ಪಿಲ್ಲ.

" ಅಮ್ಮ, ನಿನ್ನ ಮಗ ನೀ ತಿಳಿದಿರುವಷ್ಟು ಚಿಕ್ಕವನಲ್ಲ" ಎಂದು ನೀನು ನನಗೆ ಹೇಳಬಹುದು. ಆದರೆ ಈ ಪ್ರಪಂಚದ ಎಲ್ಲ ನಿಷ್ಟುರ ಸತ್ಯಗಳನ್ನು ಅರಗಿಸಿಕೊಳ್ಳುವಷ್ಟು ದೊಡ್ಡವನೂ ನೀನಲ್ಲ ಎಂಬುದು ನಮ್ಮಿಬ್ಬರಿಗೂ ಗೊತ್ತು. ಆದ್ದರಿಂದಲೇ ನನ್ನ ನಿಲುಕಿನಲ್ಲಿ ಬರುವ ಕೆಲ ವಿಷಯಗಳನ್ನು ತಾಯಿಯಾಗಿ ನಿನ್ನ ಗಮನಕ್ಕೆ ತರುತ್ತೇನೆ. ತಾಳ್ಮೆಯಿಂದ ಓದು. ಬದುಕಿನ ಪ್ರಾಥಮಿಕ ಹಂತವನ್ನು ಪೂರೈಸಿ ನೀನು ಮುಂದೆ ನಡೆಯುತ್ತಿರುವ ಸಮಯವಿದು. ಸುತ್ತಲಿನ ಪ್ರಕೃತಿ ಬದಲಾದಂತೆ ನಿನ್ನಲ್ಲಿಯೂ ಮನೋ ದೈಹಿಕ ಬದಲಾವಣೆಗಳು ಆಗುತ್ತವೆ. ಹಾರ್ಮೋನುಗಳ ಸಹಜ ಒತ್ತಡ ನಿನ್ನ ಮೇಲೆ ಭಾರಿ ಪರಿಣಾಮವನ್ನು ಬೀರಬಹುದು. ಈ ಕುರಿತು ನಿನ್ನಲ್ಲಿ ಕುತೂಹಲ, ಕೆಲವೊಮ್ಮೆ ಗೊಂದಲ ಕಾಡುವುದು ಸಹಜ, ಆದರೆ ಕೆಟ್ಟ ಕೌತುಕ ಬೇಡ. ಕಣ್ಣಿಗೆ ಕಾಣುವ ಪ್ರತಿಯೊಂದೂ ಸುಂದರವಾಗಿ ಕಾಣುವುದರಲ್ಲಿ ಯಾವುದೇ ತಪ್ಪಿಲ್ಲ. ನಿಸರ್ಗ ಸಹಜವಾಗಿ ಎಲ್ಲರಂತೆ ನಿನಗೂ ಕೂಡ ದೈಹಿಕ ಮತ್ತು ಮಾನಸಿಕ ಸ್ಥಿತ್ಯಂತರಗಳು ಉಂಟಾಗುತ್ತವೆ. ಭಯ ಬೀಳುವ ಅವಶ್ಯಕತೆಯೂ ಇಲ್ಲ.

ಚಿಕ್ಕಂದಿನಿಂದಲೂ ನಿನ್ನೊಂದಿಗೆ ಒಡನಾಡುತ್ತಿದ್ದ ನಿನ್ನ ಸ್ನೇಹಿತರೊಂದಿಗೆ ಸೇರಿ ಹರೆಯದ ಹುಮ್ಮಸ್ಸಿನಲ್ಲಿ ನಾನೀಗ ಬೆಳೆದಿದ್ದೇನೆ ಎಂಬ ಭಾವದಲ್ಲಿ, ಹುಡುಗನಿಂದ ಗಂಡಸಾಗುತ್ತಿದ್ದೇನೆ ಎಂಬ ಧೋರಣೆಯಲ್ಲಿ ನಿಮ್ಮ ಜೊತೆಗಿರುವ, ನಿಮ್ಮ ಸಂಪರ್ಕಕ್ಕೆ ಬರುವ ಹೆಣ್ಣುಮಕ್ಕಳನ್ನು ತಮಾಷೆಗೀಡು ಮಾಡಿ, ಗೇಲಿ ಮಾಡಿ ಮೋಜು ಮಾಡುತ್ತೀರಿ!! ಇದು ತಮಾಷೆಗಷ್ಟೇ ಸೀಮಿತವಾಗಿದ್ದರೆ ತಪ್ಪೇನಲ್ಲ, ವಯೋಸಹಜ ಎಂದು ಸುಮ್ಮನಾಗಬಹುದು, ಅದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಾಗಿಲ್ಲ. ಆದರೆ ಅದು ಆರೋಗ್ಯಕರವಾದ ಗೇಲಿಯಾಗಿರಬೇಕು.... ನಿಮ್ಮ ತಮಾಶೆಗೆ ಈಡಾಗುವ ಹೆಣ್ಣು ಮಗು ಸುಮ್ಮನೆ ಮುಗುಳ್ನಕ್ಕು ಮುಂದೆ ಸಾಗುವಂತಿರಬೇಕೇ ಹೊರತು ಅತ್ತು ಕರೆದು ರಾದ್ಧಾಂತವಾಗಬಾರದು. ಯಾರ ಮನೆಯ ಅಪ್ಪ ಅಮ್ಮಂದಿರು ಕೂಡ ನಿಮ್ಮ ತುಂಟಾಟಗಳಿಂದ ನೋಯಬಾರದು, ಬೇಯಬಾರದು, ತಲೆತಗ್ಗಿಸಬಾರದು.

ಇದೀಗ ನಿಮ್ಮೊಂದಿಗೆ ಓದಲು ಬಂದಿರುವ ಹೆಣ್ಣು ಮಕ್ಕಳು ತುಸು ಮುಜುಗರದಿಂದ, ಸಂಕೋಚದಿಂದ ವರ್ತಿಸಬಹುದು ಕಾರಣ ಅವರು ಕೂಡ ನಿನ್ನಂತೆಯೇ ಬದುಕಿನ ಹೊಸ ತಿರುವಿನಲ್ಲಿ ಇದ್ದಾರೆ. ನಿನ್ನ ಜೊತೆಗಿನ ಒಡನಾಟ ಅವರಿಗೊಂದು ಸುರಕ್ಷಿತತೆಯ ಭಾವವನ್ನು ಕೊಡುವಲ್ಲಿ ಸಫಲವಾಗಬೇಕು. ಕೆಲವೊಮ್ಮೆ ಅವರು ನಿನ್ನೊಂದಿಗೆ ಎಂದಿನಂತೆ ಹರಟುತ್ತಾ ತಮ್ಮ ಮನದ ಭಾವನೆಗಳನ್ನು, ತುಮುಲಗಳನ್ನು ಹೇಳಿಕೊಳ್ಳಬಹುದು..... ಅದಕ್ಕೆ ಕಾರಣ ಮನೆಯಲ್ಲಿ ತಂದೆ ಮತ್ತು ಸಹೋದರರನ್ನು ಹೊರತುಪಡಿಸಿ ಆಕೆ ನಿಮ್ಮನ್ನು ನಂಬಿರುತ್ತಾಳೆ, ನಿಮ್ಮೊಂದಿಗೆ ತನ್ನ ಮನದ ಭಾವನೆಗಳನ್ನು ಹಂಚಿಕೊಂಡರೆ ಯಾವುದೇ ತೊಂದರೆಯಾಗುವುದಿಲ್ಲ ಎಂಬ ಭರವಸೆಯಿಂದ ಆಕೆ ಹೇಳಿಕೊಂಡಿರುತ್ತಾಳೆ. ಎಂದಿಗೂ ಆಕೆಯನ್ನು ಹಗುರವಾಗಿ ಭಾವಿಸಬೇಡ, ನಂಬಿಕೆಯನ್ನು ಮುರಿಯಬೇಡ. ನಿಮ್ಮ ಜೊತೆಗಿರುವ ಹೆಣ್ಣು ಮಕ್ಕಳ ಸ್ನೇಹ, ಸಾಂಗತ್ಯ ಅವರಲ್ಲಿಧೈರ್ಯವನ್ನೂ,ನಿಮ್ಮಲ್ಲಿಜವಾಬ್ದಾರಿಯನ್ನೂಮೂಡಿಸುವಂತಿರಲಿ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಈ ಸಮಯದಲ್ಲಿ ಪ್ರೀತಿ ಪ್ರೇಮದ ಹೆಸರಿನಲ್ಲಿ ಹರೆಯದ ಹುಚ್ಚು ಮೈ ಮನಸುಗಳಿಗೆ ಕಚಗುಳಿ ಇಡುತ್ತದೆ. ಮಾಗದ ನಿಮ್ಮ ವಯಸ್ಸು ಬಾಹ್ಯ ಆಕರ್ಷಣೆಯನ್ನೇ ಪ್ರೀತಿ ಎಂದು ಭಾವಿಸುವುದು ಸಹಜ. ಸರಿ ತಪ್ಪುಗಳ, ಒಳಿತು ಕೆಡುಕುಗಳ ಅರಿವಿಲ್ಲದ ಅಂದ ಚಂದ ಉಡುಗೆ ತೊಡುಗೆ ಹರೆಯದ ಆಕರ್ಷಣೆಗಳೇ ಹೊರತು ಪ್ರೀತಿಯಲ್ಲ. ಹರೆಯದ ಆಕರ್ಷಣೆಯ ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋದವರೇ ಹೆಚ್ಚು, ಆದ್ದರಿಂದ ಜಾಗೃತನಾಗಿರು.

ಇನ್ನು ಕೆಲವೊಮ್ಮೆ ನಾವು ದೊಡ್ಡವರಾಗಿದ್ದೇವೆ ಎಂಬುದನ್ನು ತೋರುವ ಸಲುವಾಗಿಯೇ ಸ್ನೇಹಿತರೊಂದಿಗೆ ಸೇರಿ ಬಿಲ್ಡಪ್ ಕೊಟ್ಟು ಮಾತನಾಡುವುದನ್ನು ಕಲಿಯುತ್ತಾರೆ, ಹುಡುಗಿಯರನ್ನು ಚುಡಾಯಿಸುತ್ತಾರೆ, ಬೇರೆಯವರ ಮೇಲೆ ರೋಪು ಹಾಕಿ ಬುದ್ಧಿ ಕಲಿಸಲು ತಯಾರಾದವರಂತೆ ತೋರುತ್ತಾರೆ. ದೊಡ್ಡವರಾಗಬೇಕಾಗಿರುವುದು ಮಾನಸಿಕವಾಗಿಯೇ ಹೊರತು ವಿಚಿತ್ರ ಮಾತಿನ ವೈಖರಿಯಿಂದಲ್ಲ. ಲವಲವಿಕೆಯ ವ್ಯಕ್ತಿತ್ವದ ಜೊತೆ ಜೊತೆಗೆ ಗಾಂಭೀರ್ಯ ಮಿಳಿತಗೊಂಡಿದ್ದು ನಿಮ್ಮ ಪ್ರೌಢತೆಗೆ ಸಾಕ್ಷಿ ಆಗಬೇಕು.

ರಂಗು ರಂಗಿನ ಅಂಗಿಗಳು ಅಲ್ಲಲ್ಲಿ ಕತ್ತರಿಸಿದ ದೊಗಲೇ ಪ್ಯಾಂಟುಗಳು, ಒಂದು ಕಿವಿಯಲ್ಲಿ ಧರಿಸಿದ ಓಲೆ, ಸೇರಿಸಿ ಕಟ್ಟಿದರೆ ಜುಟ್ಟು ಆಗಬಲ್ಲಷ್ಟು ಉದ್ದದ ಕೂದಲು ಕೈಯಲ್ಲಿ ನೇಮಕ್ಕೊಂದು ಪುಸ್ತಕ ನೀವು ಕಾಲೇಜು ಹುಡುಗರು ಎಂಬಂತೆ ತೋರುವುದಕ್ಕಲ್ಲ.... ಸ್ವಚ್ಛವಾದ ಒಗೆದು ಇಸ್ತ್ರಿ ಮಾಡಿದ ಬಟ್ಟೆಗಳು, ಶಿಸ್ತಾಗಿ ಬಾಚಿದ ತಲೆ, ವಿಷಯಕ್ಕೆ ಸಂಬಂಧಪಟ್ಟ ನೋಟ್ಸ್ ಗಳನ್ನು ಹೊಂದಿರುವ ಬ್ಯಾಗ್ ನಿಮಗೆ ಭೂಷಣ.

ಹದಿಹರೆಯದ ಈ ಹೊತ್ತಿನಲ್ಲಿ ನಾನು ಸಿಗರೇಟ್ ಸೇದಬೇಕು, ಮದ್ಯದ ರುಚಿ ನೋಡಬೇಕು ಹುಡುಗಿಯರಿಗೆ ಲೈನ್ ಹೊಡಿಬೇಕು, ಬೈಕ್ ನಲ್ಲಿ ಇಡೀ ಜಗತ್ತು ಸುತ್ತಬೇಕು, ಹರೆಯದ ಅನುಭವವನ್ನು ದಂಡಿಯಾಗಿ ಅನುಭವಿಸಬೇಕು ಎಂದು ನಿಮಗೆ ಅನ್ನಿಸಬಹುದು... ತಪ್ಪೇನಿಲ್ಲ ಸುತ್ತಣ ಜಗತ್ತು ಮತ್ತು ವಯಸ್ಸಿನ ಪ್ರಭಾವ ಅದು. ಆದರೆ ಒಂದು ಮಾತನ್ನು ನೆನಪಿನಲ್ಲಿಟ್ಟುಕೋ.. ನೀನು ನಿನ್ನ ಪಾಲಕರೊಂದಿಗೆ ಊಟ ತಿಂಡಿ ಮಾಡುವಷ್ಟೇ ಸಹಜವಾಗಿ ಈ ಮೇಲಿನ ವಿಷಯಗಳನ್ನು ಕೂಡ ಮಾಡಬಲ್ಲೆಯ ಎಂದು ಯೋಚಿಸು?? ಯಾವ ವಿಷಯಗಳು ನಿನ್ನ ತಂದೆ ತಾಯಿಯ ಮುಂದೆ ಮಾಡಲು ನಿನಗೆ ಮಾಡಲು ಸಾಧ್ಯವಾಗುವುದಿಲ್ಲವೋ, ಯಾವ ವಿಷಯಗಳನ್ನು ಅವರೊಂದಿಗೆ ನೀನು ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲವೋ ಅವೆಲ್ಲವೂ ತಪ್ಪು ಎಂಬುದು ನಿನ್ನ ಭಾವಕ್ಕೆ ತೋಚಿರುವುದರಿಂದಲೇ ಅವರ ಮುಂದೆ ಇಂತಹ ವಿಷಯಗಳನ್ನು ಅವಾಯ್ಡ್ ಮಾಡುತ್ತೇನೆ ಎಂಬುದು ನಿನಗೆ ಗೊತ್ತಾಗುತ್ತದೆ.... ಹಾಗಾದರೆ ಗೊತ್ತಿದ್ದು ತಪ್ಪು ಮಾಡುವುದಿಲ್ಲ ಅಲ್ಲವೇ!? ಅಕಸ್ಮಾತ್ ಹಾಗೇನಾದರೂ ಮಾಡಿದ್ದರೆ ಒಂದು ಸುಳ್ಳನ್ನು ಮುಚ್ಚಲು 10 ಸುಳ್ಳುಗಳನ್ನು ಹೇಳಬೇಕಾದ ಪ್ರಮೇಯ ಬರಬಹುದು. ಹಾಗಿದ್ದಾಗ ಒಂದು ನಿಜವನ್ನು ಹೇಳಿ ಮುಂದೆ ಇಂತಹ ಪ್ರಮಾದಗಳು ಆಗದಂತೆ ನೋಡಿಕೊಳ್ಳಬಹುದು ಅಲ್ಲವೇ?

ಇನ್ನು ಕೆಲವೊಮ್ಮೆ ಸ್ನೇಹಿತರು ನಿನ್ನ ಗಂಡಸುತನದ ಮೇಲೆ ಸವಾಲು ಹಾಕಿ ನಿನಗೆ ಇಂತಹ ಕೃತ್ಯಗಳಿಗೆ ಪ್ರೇರೇಪಿಸಬಹುದು. ಮೊಟ್ಟ ಮೊದಲು ಗಂಡಸುತನ ಎಂಬ ಕಾನ್ಸೆಪ್ಟ್ ತಪ್ಪು. ಆದರೂ ಸಾಮಾಜಿಕ ವಲಯದಲ್ಲಿ ಈ ಪದವನ್ನು ಬಳಸುವುದರಿಂದ ಹೇಳುತ್ತೇನೆ ಕೇಳು. ಬಹುಶಃ ನಿಘಂಟಿನಲ್ಲಿ ತನಗಿರುವ ಅರ್ಥ ವ್ಯಾಪ್ತಿಯನ್ನು ಹೊರತುಪಡಿಸಿ ಅತಿ ಹೆಚ್ಚು ದುರ್ಬಳಕೆಗೊಂಡ ಪದ ಇದೇ ಇರಬಹುದು. ನಿಜವಾದ ಗಂಡಸುತನ ತಪ್ಪು ಮಾಡಲು ಪ್ರೇರೇಪಿಸುವುದಿಲ್ಲ. ಜಾಣ್ಮೆಯಿಂದ ವರ್ತಿಸಲು, ಗೌರವಯುತವಾಗಿ ಬಾಳಲು, ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಲು ಬಳಸಬಹುದಾದ ಪದವದು. ಹೆಣ್ಣು ಮಕ್ಕಳು ಕೂಡ ಹೀಗೆಯೇ ಇರುತ್ತಾರಲ್ಲವೇ.... ಅಂದಾಗ ಅದಕ್ಕೆ ಲಿಂಗತ್ವದ ಹಂಗೇಕೆ?

ಹರೆಯದ ಹುಮ್ಮಸ್ಸಿನಲ್ಲಿ ನಿನಗೆ ಮನೆಯಲ್ಲಿ ಬುದ್ಧಿ ಹೇಳುವ ತಂದೆ–ತಾಯಿ, ಮತ್ತಿತರ ಹಿರಿಯರು, ಕಾಲೇಜಿನಲ್ಲಿ ಪಾಠ ಮಾಡುವ ಅಧ್ಯಾಪಕರ ಮಾತುಗಳು ಬೇಸರ ಹುಟ್ಟಿಸಬಹುದು, ಅಸಡ್ಡೆ ಎನಿಸಬಹುದು... ಆದರೆ ಒಂದು ಮಾತು ನೆನಪಿಟ್ಟುಕೋ ಅವರು ಕೂಡ ತಾರುಣ್ಯದ ಆ ಬೇಗುದಿಯಲ್ಲಿ ಹಾಯ್ದು ಬಂದಿರುತ್ತಾರೆ. ತಮ್ಮ ಸುತ್ತಣ ಪ್ರಪಂಚದ ತಪ್ಪುಗಳು, ಅವಘಡಗಳು ನಿಮ್ಮಿಂದ ಜರುಗದಿರಲಿ ಎಂಬ ಆಶಯದಿಂದ ಆಗಾಗ ಸೂಕ್ಷ್ಮವಾಗಿ, ಕೆಲವೊಮ್ಮೆ ಒರಟಾಗಿಯೂ ನಿನ್ನನ್ನು ಎಚ್ಚರಿಸುತ್ತಾರೆ... ಇದರ ಹಿಂದೆ ಇರುವುದು ನಿನ್ನ ಕುರಿತಾದ ಅಪಾರ ಕಾಳಜಿ ಮತ್ತು ಪಾಲಕರಾಗಿ ತುಸು ಆತಂಕ ಮಾತ್ರ. ಬಹುಶಃ ನೀನು ತಂದೆಯಾದಾಗ ಮಾತ್ರ ನಿನಗೆ ಇದರ ಅರ್ಥವಾಗಬಹುದು.

ಸ್ನೇಹದಲ್ಲಿ ಒಳ್ಳೆಯದು ಕೆಟ್ಟದು ಎಂಬುದಿಲ್ಲ... ಆದರೆ ಸಹವಾಸದಲ್ಲಿ ಇದೆ. ನಿನ್ನದೇ ಉತ್ತಮ ಅಭಿರುಚಿಗಳನ್ನು ಹೊಂದಿರುವ ಸ್ನೇಹಿತರ ವಲಯದಲ್ಲಿ ನಿನ್ನ ಒಳಿತಿದೆ. ಪೀರ್ ಪ್ರೆಷರ್ ಎಂಬ ಮಾತುಗಳು ಇತ್ತೀಚೆಗೆ ಕೇಳಿ ಬರುತ್ತಿವೆ... ಗೆಳೆಯರ ಒತ್ತಾಯಕ್ಕಾಗಿ ಗೆಳೆಯರೊಂದಿಗಿನ ಸಹವಾಸದಲ್ಲಿ ಅವರಂತೆ ಎಂಜಾಯ್ ಮಾಡಿದರೆ ತಪ್ಪೇನು ಎಂಬ ಭಾವ ನಿನಗೂ ಬರಬಹುದು. ಪ್ರವಾಹದ ವಿರುದ್ಧ ಈಜುವುದು ಕಷ್ಟ, ಆದರೆ ಅಸಾಧ್ಯವೇನಲ್ಲ. ನಿಜ, ಒಂದು ಬಾರಿ ಅವಡುಗಚ್ಚಿ ಊಹು ಎನ್ನುವುದನ್ನು ನೀನು ಕಲಿತರೆ ಮುಂದಿನ ಹಾದಿ ಬಲು ಸುಲಭ.

ಚೆನ್ನಾಗಿ ಓದಿ ಅಂಕಗಳನ್ನು ತೆಗೆದರೆ ನಿನ್ನನ್ನು ಕುಡುಮಿ, ಫಸ್ಟ್ ರಾಂಕ್ ರಾಜು ಎಂದೆಲ್ಲ ತಮಾಷೆ ಮಾಡಬಹುದು. ಆದರೆ ಬದುಕಿನ ಗುರಿ ಉನ್ನತವಾಗಿದ್ದಾಗ ಇಂತಹ ಎಲ್ಲ ಅವಹೇಳನಗಳನ್ನು ಸಹಿಸಿಕೊಳ್ಳಬೇಕು. ಒಕ್ಕಲುತನ ಪ್ರಧಾನವಾಗಿರುವ ನಮ್ಮ ದೇಶದಲ್ಲಿ ರಾಶಿ ಮಾಡುವಾಗ ಧಾನ್ಯಗಳನ್ನು ಮೊರದಲ್ಲಿ ಹಾಕಿ ಗಾಳಿಗೆ ತೂರಿದಾಗ ಜೊಳ್ಳಷ್ಟೇ ಗಾಳಿಗೆ ತೂರಿ ಹೋಗುವುದು ಗಟ್ಟಿಕಾಳುಗಳಲ್ಲ ಎಂಬುದು ನಿನಗೆ ನೆನಪಿರಲಿ. ಸಾಧ್ಯವಾದರೆ ಅವರನ್ನು ಕೂಡ ನಿನ್ನ ದಾರಿಗೆ ಎಳೆದುಕೊಳ್ಳಲು ಪ್ರಯತ್ನಿಸುವಷ್ಟು ಗಟ್ಟಿತನ ನಿನ್ನಲ್ಲಿರಲಿ.

ಇಂದಿನ ಆಧುನಿಕ ಜನಾಂಗವನ್ನು ತನ್ನ ಕಬಂಧ ಬಾಹುಗಳಲ್ಲಿ ಬಂಧಿಸಿರುವ ಮೊಬೈಲ್ ಎಂಬ ಮಾಯಾಂಗನೆಯನ್ನು ಸಾಧ್ಯವಾದಷ್ಟು ದೂರವಿಡು. ಕೊಳವೆ ಬಾವಿಯಲ್ಲಿ ಬಿದ್ದ ಮಕ್ಕಳನ್ನಾದರೂ ಎತ್ತಬಹುದು, ಆದರೆ ಮೊಬೈಲ್ ಎಂಬ ಆಳವಾದ ಕಣಿವೆಯಲ್ಲಿ ಬಿದ್ದ ಮಕ್ಕಳನ್ನು ಎತ್ತಲಾಗದು ಎಂಬಂತಹ ಮಾತುಗಳು ಅಲ್ಲಲ್ಲಿ ಕೇಳಿ ಬರುತ್ತವೆ. ಕೇಳಲು ತಮಾಷೆ ಎಂದೆನಿಸಿದರೂ ಇದುವೇ ನಿಜವಾದ ಸತ್ಯವಾಗಿ ಪರಿಣಮಿಸಿದೆ. ನಿನಗೆ ನೀನೇ ಒಂದು ಪರಿಮಿತಿಯನ್ನು ಹಾಕಿಕೊಂಡು ಅದರಂತೆ ನಡೆದುಕೋ. ಕಾಲೇಜಿನ ಪಠ್ಯದ ಅವಧಿಯಲ್ಲಿ ಕಡ್ಡಾಯವಾಗಿ ಮೊಬೈಲನ್ನು ಸೈಲೆಂಟ್ ಮೋಡಿಗೆ ಹಾಕಿ ಅಂತರ್ಜಾಲ ಸಂಪರ್ಕವನ್ನು ಕಡಿದುಹಾಕು. ಇದರಿಂದ ಒಂದೇ ಸಮನೆ ಪಾಪ್ ಅಪ್ ಆಗುವ ಮೆಸೇಜ್ ನೋಟಿಫಿಕೇಶನ್ ಗಳಿಂದ ವಿಚಲಿತನಾಗುವುದು ತಪ್ಪುತ್ತದೆ. ವಿದ್ಯಾರ್ಥಿ ಜೀವನದಲ್ಲಿ ನಿಮ್ಮನ್ನು ನಿಮ್ಮ ಗುರಿಯಿಂದ ಬಹುದೂರ ಕೊಂಡೊಯ್ಯುವ ಮೊಬೈಲ್ ಎಂಬ ಡಿಜಿಟಲ್ ಸಾಧನ ನಿಮ್ಮ ಆಮೂಲಾಗ್ರ ಬೆಳವಣಿಗೆಗೆ ಮಾರಕ. ಒಂದು ವಸ್ತು, ಒಂದು ವಿಷಯದ ಕುರಿತು ಏನನ್ನಾದರೂ ಹುಡುಕಲು ಮೊಬೈಲ್ ನ ಹಲವಾರು ಆಪ್ ಗಳು ಅನುಕೂಲಕರವಾದರೂ ನಮ್ಮ ದಿನದ ಹೆಚ್ಚಿನ ಸಮಯವನ್ನು ಇವುಗಳ ಹುಡುಕಾಟದಲ್ಲಿ ನಾವು ಬೇಡದ ಮತ್ತಿನ್ನಾವುದೋ ಒಂದು ವಿಷಯದೆಡೆ ಸೆಳೆಯಲ್ಪಡುತ್ತೇವೆ... ಇದು ನಮ್ಮ ಬೆಳವಣಿಗೆಗೆ ಪೂರಕವಾಗಿರದೆ ಮಾರಕವಾಗುತ್ತದೆ ಎಂಬ ಸತ್ಯ ನಿನ್ನ ಅನುಭವಕ್ಕೂ ಬಂದಿರಬಹುದು.... ಆದ್ದರಿಂದ ಮೊಬೈಲ್ ಬಳಕೆಯ ಸಮಯದಲ್ಲಿ ಜಾಗೃತನಾಗಿರು. ರೀಲ್ಸ್ ಗಳನ್ನು ನೋಡುವುದರಲ್ಲಿ, ಚಾಟ್ ಮಾಡುತ್ತಾ, ವಿಡಿಯೋಗಳನ್ನು ನೋಡುತ್ತಾ ನಿನ್ನ ಸಮಯವನ್ನು ವ್ಯರ್ಥಗೊಳಿಸಬೇಡ.

ಸಾಧ್ಯವಾದಷ್ಟು ಆಟೋಟಗಳಲ್ಲಿ ಪಾಲ್ಗೊಳ್ಳುವ ಮೂಲಕ ನಿನ್ನ ಮನೋದೈಹಿಕ ಆರೋಗ್ಯವನ್ನು ಕಾಯ್ದುಕೋ. ಪಠ್ಯೇತರ ಚಟುವಟಿಕೆಗಳು ನಿನ್ನ ವಿದ್ಯಾರ್ಥಿ ಜೀವನದ ಸುವರ್ಣ ಗಳಿಗೆಗಳು... ಮಿಸ್ ಮಾಡದೆ ಎಲ್ಲದರಲ್ಲಿಯೂ ಭಾಗವಹಿಸು.

ಯಾವುದೇ ರೀತಿಯ ಜಾತಿ, ಮತ, ಪಂಥ, ಪಕ್ಷ ಚಟುವಟಿಕೆಗಳು ನಿನ್ನ ಓದಿಗೆ ಮಾರಕವಾಗದಿರಲಿ. ಕುವೆಂಪು ಅವರ "ಮನುಜ ಮತ ವಿಶ್ವಪಥ" ಎಂಬ ವಿಶ್ವಮಾನವ ಪ್ರಜ್ಞೆಯನ್ನು ನಿನ್ನಲ್ಲಿ ಬೆಳೆಸಿಕೋ. ಯಾರಾದರೂ ತಪ್ಪು ಮಾಡಿದಾಗ, ಏನಾದರೂ ಅವಘಡ ನಡೆದಾಗ ಅದರ ಪೂರ್ವಾಪರವನ್ನು ಅರಿಯದೆ ಯಾವುದಕ್ಕೂ ಪ್ರತಿಕ್ರಿಯಿಸಬೇಡ. ಆರ್ಥಿಕ ಅಂತಸ್ತಿನ ಮೇಲೆ ಸ್ನೇಹಿತರ ಆಯ್ಕೆ ಬೇಡ. ಸಾಮಾನ್ಯ ಅಂಕಗಳನ್ನು ಪಡೆದರೂ ಒಳ್ಳೆಯ ಮೌಲ್ಯಗಳನ್ನು ಹೊಂದಿರುವ ಸ್ನೇಹಿತರ ಬಳಗ ನಿನ್ನದಾಗಿರಲಿ.

ಬನಿಯನ್ನಿನ ತೂತುಗಳನ್ನು ಮುಚ್ಚಿ ಹಾಕುವ ಶರ್ಟು ಧರಿಸಿ, ಸವೆದ ಚಪ್ಪಲಿಯಲ್ಲಿ ಕಾಲೆಳೆಯುತ್ತಾ ಸಾಗಿದರೂ ಹೊಸದೊಂದು ಜೋಡು ಖರೀದಿಸಲು ಬಯಸದ ನಿನ್ನ ಅಪ್ಪ ತನ್ನ ದುಡಿಮೆಯ ಪ್ರತಿ ಪೈಸೆಯನ್ನು ನಿಮ್ಮ ಓದಿಗಾಗಿ, ಹಾಸ್ಟೆಲ್ಲಿಗಾಗಿ, ಬಟ್ಟೆ ಬರೆಗಳಿಗೆ ಧಾರಾಳಿಯಂತೆ ಖರ್ಚು ಮಾಡುವುದು ಪ್ರತಿಫಲದ ನಿರೀಕ್ಷೆಯಿಂದಲ್ಲ. ನೀವು ಓದಿ ಒಳ್ಳೆಯ ವಿದ್ಯಾವಂತರಾಗಿ ನಿಮ್ಮ ಕಾಲ ಮೇಲೆ ನೀವು ನಿಂತುಕೊಂಡರೆ ವಯಸ್ಸಿಗಿಂತಲೂ ತುಸು ಹೆಚ್ಚೇ ನೆರಿಗೆಯಿಂದ ಸುಕ್ಕಾಗಿರುವ ಆತನ ಮುಖದಲ್ಲಿ ಹೆಮ್ಮೆಯ ನಗು ಮೂಡಬಹುದು, ಸವೆಸಿದ ಕಷ್ಟ ಮರೆಯಬಹುದು.

ನಿನ್ನಪ್ಪ....ನಿನ್ನಮ್ಮನಂತೆ ಮನ ಬಿಚ್ಚಿ ಮಾತನಾಡುವುದಿಲ್ಲ, ತನ್ನಂತರಂಗದ ಬೇಗುದಿಯ ಹೇಳಿಕೊಳ್ಳುವುದಿಲ್ಲ, ಪ್ರೀತಿಯನ್ನು ವ್ಯಕ್ತಪಡಿಸುವುದಿಲ್ಲ ಆದರೆ ನೀನಿಲ್ಲದ ಸಮಯದಲ್ಲಿ ಆತನ ಬಹುತೇಕ ಸಮಯ ಕಳೆಯುವುದು ನಿನ್ನ ನೆನವರಿಕೆಯಲ್ಲಿ. ನಿನ್ನ ಕೋಣೆಯ ಹಾಸಿಗೆಯ ಮೇಲೆ ಕುಳಿತು, ಮಲಗಿ, ನೀನು ಬಳಸುವ ವಸ್ತುಗಳನ್ನು ಮುಟ್ಟಿ ತಡವಿ ನಿನ್ನಿರುವಿಕೆಯನ್ನು ಅನುಭವಿಸುತ್ತಾನೆ. ಬಹುಶಃ ಈ ಸಮಾಜದ ಸೋ ಕಾಲ್ಡ್ ಗಂಡಸುತನ ಆತನ ಸಂವೇದನೆಗಳನ್ನು ಹೇಳಿಕೊಳ್ಳಲು ಅವಕಾಶ ನೀಡುವುದಿಲ್ಲ ಅಷ್ಟೇ.... ಆತನ ಪರದಾಟವನ್ನು ಕಂಡು ನಾನು ಮನದಲ್ಲಿ ಮುಸಿ ನಗುತ್ತೇನೆ.

ನಿನ್ನಪ್ಪನ ಬಾಳಿನ ಮುಸ್ಸಂಜೆಯಲ್ಲಿ ನೀನು ಊರುಗೋಲಾಗದಿದ್ದರೂ ಪರವಾಗಿಲ್ಲ.... ಆತನ ಮನದ ಕಿಬ್ಬದಿಯ ಕೀಲು ಮುರಿಯದಂತೆ ಓದಿ ವಿದ್ಯಾವಂತನಾಗಿ, ಬದುಕಿನಲ್ಲಿ ಯಶಸ್ವಿಯಾಗಿ ನಿನ್ನಪ್ಪ ಹೆಮ್ಮೆಯಿಂದ ಎದೆಯುಬ್ಬಿಸಿ ನಡೆಯುವಂತೆ ಬಾಳಿದರೆ ಆತನ ಶ್ರಮ ಸಾರ್ಥಕ.

ಇದರ ಜೊತೆಗೆ ಇನ್ನೊಂದು ಮಾತು.... ಓದು ಬದುಕಿಗೆ ಬಲು ಮುಖ್ಯ ನಿಜ.. ಆದರೆ ಓದಲಾಗದೆ ಪರೀಕ್ಷೆಯಲ್ಲಿ ಫೇಲ್ ಆಗುವೆ ಎಂಬ ಭಯದಿಂದ ಯಾರಲ್ಲೂ ಹೇಳಿಕೊಳ್ಳಲಾಗದ ತಳಮಳದಿಂದ ಹಿಮ್ಮೆಟ್ಟದಿರು. ನಿನ್ನೆಲ್ಲ ಪ್ರಯತ್ನಗಳ ಹೊರತಾಗಿಯೂ ನಿನಗೆ ಓದು ತಲೆಗೆ ಹತ್ತದಿದ್ದರೆ, ನಿನ್ನ ಆಸಕ್ತಿ ಕಳೆದು ಹೋದರೆ ಬದುಕೇ ಮುಗಿದು ಹೋಯಿತು ಎಂದು ಆಕಾಶವೇ ತಲೆ ಮೇಲೆ ಬಿದ್ದಂತೆ ಭಾವಿಸಬೇಡ .... ಯಶಸ್ವಿ ಬದುಕನ್ನು ಸಾಗಿಸಲು ಓದಿನಷ್ಟೇ ಮುಖ್ಯವಾಗಿ ಬದುಕಲು ಬೇಕಾಗುವ ಹಲವಾರು ಒಳ್ಳೆಯ ಉದ್ಯೋಗ ಆಧಾರಿತ ತರಬೇತಿಗಳಿವೆ.

ಅಂತಿಮವಾಗಿ ಮನುಷ್ಯನ ಮುಖ್ಯ ಉದ್ದೇಶ ಒಂದು ನೆಮ್ಮದಿಯ ಜೀವನ.... ಕೋಟಿ ಕೋಟಿ ಹಣ ಗಳಿಸಿದರೂ ಸಿಗದ ನೆಮ್ಮದಿ ನಮ್ಮವರ ಒಡನಾಟದಲ್ಲಿ ನಮ್ಮದೇ ಊರಿನಲ್ಲಿ ಬದುಕು ನಡೆಸಿದಾಗ ದೊರೆಯುತ್ತದೆ. ಅಂತಹ ಪ್ರಸಂಗ ಬಂದಾಗ ವೃತ್ತಿಪರ ಶಿಕ್ಷಣಕ್ಕೆ ಅವಕಾಶ ದೊರೆಯದೆ ಹೋದರೆ ವೃತ್ತಿ ಆಧಾರಿತ ಶಿಕ್ಷಣವನ್ನು ಪಡೆದು ಔದ್ಯೋಗಿಕ ವಲಯದಲ್ಲಿ, ಕೃಷಿ ವಲಯದಲ್ಲಿ ನೆಲೆ ಕಾಣಬಹುದು. ನೀನೇ ಉದ್ಯೋಗವನ್ನು ಹುಡುಕಿಕೊಂಡು ಅಲೆಯುವುದರ ಬದಲು ಉದ್ಯೋಗವನ್ನು ಸೃಷ್ಟಿಸುವ ಉದ್ದಿಮೆಯನ್ನು ಸ್ಥಾಪಿಸಬಹುದು. ಸತತವಾದ ಪ್ರಯತ್ನಕ್ಕೆ ಫಲ ಖಂಡಿತವಾಗಿಯೂ ಸಾಧ್ಯವಿದೆ.

ಬದುಕಿನ ಈ ಪಯಣದಲ್ಲಿ ವಿದ್ಯಾರ್ಥಿ ಜೀವನದ ಸುವರ್ಣ ಗಳಿಗೆಗಳನ್ನು ಅನುಭವಿಸಿ ಒಳ್ಳೆಯ ಭವಿಷ್ಯಕ್ಕೆ ಮುನ್ನುಡಿ ಹಾಕು. ನಮ್ಮೆಲ್ಲರ ಪ್ರೀತಿಯ ಆಶೀರ್ವಾದ, ಬೆಂಬಲ ನಿನಗೆ ಸದಾ ಇದ್ದೇ ಇರುತ್ತದೆ. ನಿನ್ನ ನಿಶ್ಚಿತ ಗುರಿಯನ್ನು ಸಾಧಿಸುವ ಉದ್ದೇಶ ಮತ್ತು ಛಲ ನಿನ್ನಲ್ಲಿರಲಿ.

ಸದಾ ನಿನ್ನ ಒಳಿತನ್ನೇ ಬಯಸುವ ನಿನ್ನ ಅಮ್ಮ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**25–06–2024 – ಮಂಗಳವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶ್ರಾವಣ |
| ಯೋಗ | : ವೈಧೃತಿ |
| ಕರಣ | : ಭವ |
| ಸೂರ್ಯೋದಯ | : 05:44:19 |
| ಸೂರ್ಯಾಸ್ತ | : 19:15:04 |
| ರಾಹು | : 15:52–17:34 |
| ಯಮಘಂಡ | : 09:07–10:48 |
| ಗುಳಿಕ | : 12:30–14:11 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 24–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.73 ಅಡಿ |
| ಒಳ ಹರಿವು | 1056 ಕ್ಯುಸೆಕ್ |
| ಹೊರ ಹರಿವು | 2037 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.370 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.36 ಅಡಿ |
| ಒಳ ಹರಿವು | 187 ಕ್ಯುಸೆಕ್ |
| ಹೊರ ಹರಿವು | 285 ಕ್ಯುಸೆಕ್ |
| ಸಾಮರ್ಥ್ಯ | 4.168 ಟಿಎಂಸಿ |

# ಕ್ಷಯವಿದ್ದರೆ ಭಯಪಡಬೇಡಿ ಗುಣಮುಖಕ್ಕಿದೆ ಉಚಿತ ಚಿಕಿತ್ಸೆ

### ಡಿಎಚ್‌ಓ ಡಾ.ವೈ.ರಮೇಶ್ ಬಾಬು ಹೇಳಿಕೆ । ಕ್ಷಯರೋಗ ನಿರ್ಮೂಲನೆ ಕೈಜೋಡಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

'ಕ್ಷಯ' ಎಂದು ಖಚಿತಪಟ್ಟಲ್ಲಿ ವೈದ್ಯರ ನಿರ್ದೇಶನದಂತೆ, 6 ತಿಂಗಳು ಉಚಿತ ಚಿಕಿತ್ಸೆ ಪಡೆದು ಗುಣಮುಖರಾಗುವ ಮೂಲಕ ಕ್ಷಯಮುಕ್ತ ಜಿಲ್ಲೆಗಾಗಿ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ತಿಳಿಸಿದರು.

ನಗರದ ಗುಗ್ಗರಹಟ್ಟಿ ವ್ಯಾಪ್ತಿಯಲ್ಲಿ ಕ್ಷೇತ್ರ ಭೇಟಿ ನಡೆಸಿ ಮಾತನಾಡಿದ ಅವರು, 'ಮೈಕ್ರೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯುಲೋಸಿಸ್' ಎಂಬ ರೋಗಾಣುನಿಂದ ಶತಮಾನಗಳಿಂದಲೂ ಸಮುದಾಯದಲ್ಲಿ ಇರುವ ಕ್ಷಯರೋಗವನ್ನು ನಿರ್ಮೂಲನೆ ಮಾಡಲು ಪಣತೊಡಬೇಕಿದೆ. ಯಾರಿಗಾದರೂ ಎರಡು ವಾರಗಳಿಗಿಂತ ಹೆಚ್ಚು ದಿನದ ಕೆಮ್ಮು, ಉಸಿರಾಟದಲ್ಲಿ ತೊಂದರೆ, ಸಂಜೆ ವೇಳೆ ಜ್ವರ, ರಾತ್ರಿ ವೇಳೆ ಮೈ ಬೆವರುವುದು, ಕಫದಲ್ಲಿ ರಕ್ತ ಬೀಳುವುದು, ಎದೆ ನೋವು, ಹಸಿವಾಗದಿರುವುದು, ತೂಕ ಇಳಿಕೆ ಸೇರಿದಂತೆ ಲಕ್ಷಣಗಳಿದ್ದವರು ತಮ್ಮ ಗಮನಕ್ಕೆ ಬಂದಲ್ಲಿ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಕಳುಹಿಸಿ ಪರೀಕ್ಷೆ ಮಾಡಿಸಿ, ಬೇಗನೆ ರೋಗ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯುವಂತೆ ಸೂಚಿಸಬೇಕು ಎಂದು ತಿಳಿಸಿದರು.

ಒಮ್ಮೆ ರೋಗ ಪತ್ತೆಯಾದರೆ ಅವರ ಚಿಕಿತ್ಸಾ ಅವಧಿ ಮುಗಿಯುವವರೆಗೆ ಮೇಲ್ವಿಚಾರಣೆ, ಅವರಿಗೆ ಬೆಂಬಲ ಹಾಗೂ ದಾನಿಗಳಿಂದ



ಪೌಷ್ಟಿಕ ಆಹಾರ ವಿತರಿಸಲಾಗುತ್ತದೆ ಎಂದು ಹೇಳಿದರು.

ಮಕ್ಕಳಿಗೆ ಕ್ಷಯರೋಗ ಇದ್ದಲ್ಲಿ ಪಾಲಕರ ಮತ್ತು ಸುತ್ತಲಿನ ಮನೆಗಳ ಹಾಗೂ ಮಗುವಿಗೆ ಒಡನಾಟವಿರುವವರು ಪರೀಕ್ಷಿಸಿಕೊಳ್ಳಬೇಕು. ಮುಖ್ಯವಾಗಿ ಚಿಕಿತ್ಸೆ ನಿರ್ಲಕ್ಷಿಸಿದಲ್ಲಿ ರೋಗಿಯು ಬಹುಔಷಧಿ ರೋಗ ನಿರೋಧಕ ಕ್ಷಯರೋಗಿಯಾಗಿ ಎರಡು ವರ್ಷಗಳ ಕಾಲ ಚಿಕಿತ್ಸೆ ಪಡೆಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ವೈದ್ಯ ವೃತ್ತಿ ಮಾಡುವವರು ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ಅತ್ಯಂತ ಅಪಾಯಕಾರಿ ಸನ್ನಿವೇಶಕ್ಕೆ ಒಳಗಾಗುತ್ತಾರೆ. ಮುಂಜಾಗೃತೆ ವಹಿಸಿ ಯಾರಾದರೂ ಚಿಕಿತ್ಸೆ ಪಡೆಯಲು ನಿರಾಕರಿಸಿದರೆ ಸ್ಥಳೀಯ ಸಹಕಾರದೊಂದಿಗೆ ಚಿಕಿತ್ಸೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಮುಖ್ಯವಾಗಿ ಕ್ಷಯ ರೋಗವನ್ನು ಸಾಮಾನ್ಯ ಖಾಯಿಲೆ ಎಂಬ ರೀತಿಯಲ್ಲಿ ಕಾಣುವ ಮೂಲಕ ಕಳಂಕ–ತಾರತಮ್ಯ ತೊಲಗಿಸುವ ಪ್ರಯತ್ನ ಮಾಡಬೇಕು ಎಂದು ಡಿಹೆಚ್‌ಓ ವಿನಂತಿಸಿದರು.

ಈ ವೇಳೆ ಗುಗ್ಗರಹಟ್ಟಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶಾಗುಫ್ತಾ ಷಾಹೀನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಆರೋಗ್ಯ ಸಿಬ್ಬಂದಿಯರಾದ ನಿರಂಜನ, ಈರಯ್ಯ, ಉಮಾ ಸೇರಿದಂತೆ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

# ವಿವಿಧೆಡೆ ದಾಳಿ: 02 ಬಾಲಕಾರ್ಮಿಕರ ರಕ್ಷಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಬಳ್ಳಾರಿ ನಗರದಲ್ಲಿ ವಿವಿಧೆಡೆ ದಾಳಿ ನಡೆಸಿ ಇಬ್ಬರು ಬಾಲ ಕಾರ್ಮಿಕ ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಮೌನೇಶ್ ಅವರು ತಿಳಿಸಿದ್ದಾರೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಕಾರ್ಮಿಕ ಇಲಾಖೆ, ಪೋಲಿಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಚೈಲ್ಡ್‌ಲೈನ್ ಸಹಯೋಗದೊಂದಿಗೆ ನಗರದ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ರಡಿಯಲ್ಲಿ ನೇಮಕವಾದ ನಿರೀಕ್ಷಕರ ಟಾಸ್ಕ್ ಪೋರ್ಸ್ ಸಮಿತಿ ಸಭೆಯನ್ನು ನಡೆಸಿ ಈ ಕಾರ್ಯಚಾರಣೆ ಮಾಡಲಾಗಿದೆ. ನಗರದ ಬೆಂಗಳೂರು ರಸ್ತೆ, ಬಂಡಿಹಟ್ಟಿ, ಎ.ಪಿ.ಎಂ.ಸಿ ವೃತ್ತ ಮಂತಾದ ಸ್ಥಳಗಳಲ್ಲಿರುವ ಗ್ಯಾರೇಜ್, ಬೇಕರಿ, ಹೋಟೆಲ್, ಮೆಕ್ಯಾನಿಕ್ ಶಾಪ್, ಕಿರಾಣಿ ಅಂಗಡಿ, ಇಟ್ಟಂಗಿ ಭಟ್ಟಿ, ಗುಜರಿ ಶಾಪ್ ಇತ್ಯಾದಿ ಉದ್ದಿಮೆಗಳ ಮೇಲೆ ಆಕಸ್ಮಿಕ ದಾಳಿ ಮಾಡಿ 02 ಬಾಲಕಾರ್ಮಿಕ ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಿ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿ ತರಲು ಸಂಬಂಧಿಸಿದ ಇಲಾಖೆಗೆ ಒಪ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಈ ಟಾಸ್ಕ್ ಪೋರ್ಸ್ ಸಮಿತಿಯಲ್ಲಿ ಬಳ್ಳಾರಿ ತಾಲ್ಲೂಕು ಕಚೇರಿಯ ಶಿರಸ್ಥೆದಾರರಾದ ಸಾದಿಕ್, ಕಾರ್ಮಿಕ ನಿರೀಕ್ಷಕ ರವಿದಾಸ್, ಶಿಕ್ಷಣ ಸಂಯೋಜಕ ಪಂಪಾಪತಿ, ಭುಜಂಗ ಆಚಾರಿ, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಶ್ರೀ ಧರ್ಮಸ್ಥಳ ಸಂಸ್ಥೆಯಿಂದ ಪರಿಸರ ಸಂರಕ್ಷಣೆ ಜಾಗೃತಿ



■ **ಹಂಪಿ ಟೈಮ್ಸ್ ಕೊಟ್ಟೂರು**

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಗಚ್ಚಿನ ಮಠ ಶಾಲೆಯಲ್ಲಿ ಸೋಮವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಟ್ಟೂರು ವಲಯದ ವತಿಯಿಂದ ಸಸಿ ನೆಟ್ಟು ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಶಾಲೆಯ ಮುಖ್ಯೋಪಾಧ್ಯಾಯರು ವಿ.ಆರ್ ಕಲಾ, ಶಿಕ್ಷಕರು ಶಿವಣ್ಣ, ಸುರೇಶ್ ದಾದಾಪೀರ್ ಮತ್ತು ಒಕ್ಕೂಟದ ಪದಾಧಿಕಾರಿಗಳು ರೂಪ, ರೇಣುಕಮ್ಮ ಯೋಜನೆಯ ಮೇಲ್ವಿಚಾರಕರು ರುದ್ರೇಶ್, ಕೃಷಿ ಮೇಲ್ವಿಚಾರಕರಾದ ಮಹಾಂತೇಶ್, ಸೇವಾ ಪ್ರತಿನಿಧಿ ಭಾರತಮ್ಮ, ಗೀತಾ ಹಾಗೂ ಶಾಲಾ ಮಕ್ಕಳು ಇದ್ದರು.

# ಚಿನ್ನದ ಪದಕದೊಂದಿಗೆ ರಾಜ್ಯಕ್ಕೆ ಪ್ರಥಮ ಸ್ಥಾನ: ಗಾಯತ್ರಿಗೆ ಸನ್ಮಾನ



■ **ಹಂಪಿ ಟೈಮ್ಸ್ ಹೋಸಪೇಟೆ**

ರಾಜ್ಯ ಮಟ್ಟದ ಪುನರ್‌ಮನನ ಮೀನಲ್ಲಿ ಘಟಕದಲ್ಲಿ ತರಬೇತಿಯಲ್ಲಿ ಬಂಗಾರದ ಪದಕದೊಂದಿಗೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಗೃಹರಕ್ಷಕಿ ಡಿ.ಗಾಯಿತ್ರಿ ಅವರನ್ನು ನಗರದ ಗೃಹರಕ್ಷಕ ಕಚೇರಿಯಲ್ಲಿ ಹೊಸಪೇಟೆ ತಾಲೂಕು ಘಟಕದ ವತಿಯಿಂದ ಭಾನುವಾರ ಸನ್ಮಾನಿಸಲಾಯಿತು. ಗೃಹರಕ್ಷಕ ದಳದ ಜಿಲ್ಲಾ ಸಮಾದೇಷ್ಟಕ ಬಸವರಾಜ್ ಅಗಸರ, ಭೋದಕರಾದ ಪ್ರಶಾಂತ್ ಪಾಟೀಲ್, ಘಟಕಾಧಿಕಾರಿಗಳಾದ ಎಸ್.ಎಂ.ಗೀರಿಶ್ ಹಾಗು ಪ್ಲಟೂನ್ ಕಮಾಂಡರ್ ವಿ.ಪರಶುರಾಮ, ಎಲ್.ವಾಲ್ಯಾನಾಯ್ಕ ಗೃಹರಕ್ಷಕ ದಳದ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದರು.

# ಜೂನ್ 25ಕ್ಕೆ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**

ಸಂಕ್ಲಾಪುರ ಉಪಕೇಂದ್ರದ ಹತ್ತಿರ ಕೇಬಲ್ ಬದಲಾವಣೆ ತುರ್ತು ಕಾಮಗಾರಿ ಇರುವುದರಿಂದ ಜೂನ್ 25ರ ಬೆಳಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಹೊಸಪೇಟೆ ಗ್ರಾಮೀಣ ಶಾಖಾ ವ್ಯಾಪ್ತಿಗೆ ಬರುವ ಬಿ.ವಿ.ಗೆರೆ, ಕಾಕುಬಾಳು, ಜಿ.ವಿ.ಗೆರೆ, ವಡ್ಡರಹಳ್ಳಿ, ಪಿ.ಕೆ.ಹಳ್ಳಿ, ಕಲ್ಲಹಳ್ಳಿ, ರಾಜಾಪುರ, ಗ್ರಾಮಗಳ ನೀರಾವರಿ ಪಂಪ್ ಸೆಟ್ ರೈತರಿಗೆ



ವಿದ್ಯುತ್ ಅಡಚಣೆ ಆಗಲಿದೆ ಮತ್ತು ಕಲ್ಲಹಳ್ಳಿ, ರಾಜಾಪುರ, ಜಿ.ವಿ.ಗೆರೆ, ಕಾಕು ಬಾಳು, ಕೊಟ್ಟಿಗಿನ ಹಾಳ, ವಡ್ಡರಹಳ್ಳಿ ಗ್ರಾಮಗಳಿಗೆ ಮತ್ತು ಹೊಸಪೇಟೆ ನಗರ ವ್ಯಾಪ್ತಿಯಲ್ಲಿ ಬರುವ ಸಂಕ್ಲಾಪುರ ಓಲ್ಡ್, ಸಂಕ್ಲಾಪುರ ತಾಂಡ, ಎನ್‌ಎಮ್‌ಡಿಸಿ ಕಾಲೋನಿ, ವಿನಾಯಕ ನಗರ ಬಿಸಿಎಮ್ ಹಾಸ್ಟೇಲ್, ಓವರ್ ಹೆಡ್ ವಾಟರ್ ಟ್ಯಾಂಕ್ ಮಲ್ಲಿನಾಥ ಲೇಔಟ್, ಕಾರಿಗನೂರು ಬೈಪಾಸ್ ಮೇನ್ ರೋಡ್, ಹಂಪಿನ ಕಟ್ಟೆ, ವಾಲ್ಮೀಕಿ ನಗರ, ಶಿಖಾರಿ ಕ್ಯಾಂಪ್, ಜಿಜಿ ಕ್ಯಾಂಪ್, ಕೋಸೀಯಾ ಕ್ಯಾಂಪ್, ಕಾರಿಗನೂರು ಕೇರಿ, ಪಾಂಡುರಂಗ ದೇವಸ್ಥಾನ ಏರಿಯಾ, ಬ್ರಿಕ್ಸ್ ಫ್ಯಾಕ್ಟರಿ 88 ರೆಹಮನ ಲೇಔಟ್, ಮಾರುತಿ ಕಾಲೋನಿ, ಕೊಟ್ರೇಶ್ವರ ಲೇಔಟ್, ಜಂಬುನಾಥ ರೋಡ್ ತಾಂಡ, ಜಂಬುಕೇಶ್ವರ ಬಡಾವಣೆ, ಏಳುಮಕ್ಕಳ ತಾಯಮ್ಮ ದೇವಸ್ಥಾನ, ಹುಡಾ ಲೇಔಟ್, ಕೆಎಂಕೆ ಲೇಔಟ್, ಎಮ್‌ಎಮ್‌ಎಲ್ ಆಫೀಸ್ ಜಂಬುನಾಥ ಬೈಪಾಸ್, ಐಟಿಐ ಕಾಲೇಜ್. ಆದರ್ಶ ಶಾಲೆ, ಎಸ್‌ಸಿಎಸ್‌ಟಿ ಮೂರಾರ್ಜಿ ಶಾಲೆ, ಜಂಬುನಾಥ ಹಳ್ಳಿ, ಸಂಕ್ಲಾಪುರ ಇಂಡಸ್ಟ್ರೀಯಲ್ ಏರಿಯಾದಲ್ಲಿ ವಿದ್ಯುತ್ ಅಡಚಣೆ ಆಗಲಿದೆ. ಆದ್ದರಿಂದ ಎಲ್ಲಾ ರೈತ ಬಾಂಧವರು ಹಾಗೂ ಗ್ರಾಹಕರು ಸಹಕರಿಸಬೇಕು ಎಂದು ಜೆಸ್ಕಾಂನ ಕಾರ್ಯಪಾಲಕ ಮತ್ತು ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಹಿತಿ ಕಮಲಾ ಹಂಪನಾ ಕೊಡುಗೆ ಅಪಾರ

### ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ ಪರಮಶಿವಮೂರ್ತಿ ಹೇಳಿಕೆ । ಮೌನಾಚರಣೆ ಮೂಲಕ ಸಂತಾಪ

■ **ಹಂಪಿ ಟೈಮ್ಸ್ ಹೊಸಪೇಟೆ**

ನಾಡಿನ ಹಿರಿಯರಾದ ಸಾಹಿತಿಗಳು ಹಾಗೂ ಸಾಹಿತ್ಯ ವಲಯದ ದಂಪತಿಗಳು ಎಂದು ಬಿರುದು ಪಡೆದಿದ್ದ ಪ್ರೊಫೆಸರ್ ಹಂಪನಾ ಹಾಗೂ ಕಮಲಾ ಹಂಪನಾ ಅವರು ಸಾಹಿತ್ಯ ವಲಯಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ ಪರಮಶಿವಮೂರ್ತಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಸೋಮವಾರ ಕಮಲಾ ಹಂಪನಾ ಅವರ ನಿಧನದ ಗೌರವಾರ್ಥಕ ಸಂತಾಪ ಸೂಚಕ ಸಭೆಯಲ್ಲಿ ಮಾತನಾಡಿದರು. ಕಮಲಾ ಹಂಪನಾ ಅವರು ಹಲವಾರು ಪುಸ್ತಕ, ಕವನ ಸಂಕಲನ, ಕಥೆ, ಕವಿತೆ, ಮತ್ತು ಕಾದಂಬರಿ ಸಂಶೋಧನಾ ಗ್ರಂಥಗಳನ್ನು ಸಂಪಾದಿಸಿದ್ದಾರೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಸಹ ಪಡೆದುಕೊಂಡಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಜೊತೆಗೆ ನಿಕಟ ಸಂಪರ್ಕವನ್ನು ಹೊಂದಿದ ವರಾಗಿದ್ದರು. ಜೈನ ಸಾಹಿತ್ಯದ ಬಗ್ಗೆ ತುಡಿತ ಹೊಂದಿದ ಮಹಿಳೆಯರ ಸಾಲಿನಲ್ಲಿ ಒಬ್ಬ ಲೇಖಕಿಯನ್ನು ನಾವು ಕಳೆದುಕೊಂಡಂತಾಗಿದೆ ಎಂದರು. ಇವರು ಹಲವಾರು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಆಕಾಶವಾಣಿ ನಾಟಕರೂಪಕಗಳಲ್ಲಿ ಪ್ರಸಿದ್ಧಿಯನ್ನು ಸಹ ಪಡೆದಿದ್ದರು. ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಆಗಿದ್ದರು. 1998ರಲ್ಲಿ ಕನ್ನಡ ವಿಶ್ವವಿದ್ಯಾಲಯವು ನಾಡೋಜ ಪುರಸ್ಕಾರವನ್ನು ಕೊಟ್ಟು ಗೌರವಿಸಿತ್ತು ಎಂದರು. ನಾಡಿನಲ್ಲಿ ಕ್ರಿಯಾಶೀಲ ಮಹಿಳೆಯಾಗಿ ಕನ್ನಡದ ಉತ್ತಮ ಬರಹಗಾರ್ತಿಯಾಗಿ ಇವರು ಮುಂಚೂಣಿ ಯಲ್ಲಿದ್ದರು. ಪ್ರಾಧ್ಯಾಪಕರಾದ ಹಂಪನಾ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ದೇವರು ನೀಡಲಿ ಎಂದರು. ನಂತರ ಎಲ್ಲರೂ ಮೌನಾಚರಣೆ ಮೂಲಕ ಅಗಲಿದ ಆತ್ಮಕ್ಕೆ ಶಾಂತಿ ಕೋರಿದರು. ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿಜಯ



ಪೂಣಚ್ಚ ತಂಬಂಡ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಬಳಸಿ ಬೀಸಾಡುವ ಮುನ್ನ ಯೋಚಿಸಿ

ಮೊದಲ ಪುಟದಿಂದ

ಮಾತನಾಡಿ ಪ್ರತಿ ವರ್ಷ 13,000 ಲಕ್ಷ ಟನ್ ತ್ಯಾಜ್ಯ ಉತ್ಪಾದನೆಯಾಗುತ್ತದೆ. ಸರಕಾರಗಳು ಪರಿಸರ ಸಂರಕ್ಷಣೆಗಾಗಿಯೇ ಹಲವಾರು ಸಂಸ್ಥೆಗಳಿಗೆ ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತಿದೆ. ಆದರೆ ಈ ಕೆಲಸಕ್ಕೆ ಕೆಲಸಗಾರರ ಕೊರತೆ ಇದೆ. ಜೈವಿಕ ಮತ್ತು ಅಜೈವಿಕ ಕಸಗಳನ್ನು ಬೇರ್ಪಡಿಸಬೇಕು. ನಿರ್ವಹಣೆ ಘಟಕಗಳಲ್ಲಿ ಕೆಲಸಗಾರರಿಗೆ ಆರೋಗ್ಯದಲ್ಲಿ ತೊಂದರೆಯಾಗುವುದರಿಂದ ಇದರ ಒಲವು ಕಡಿಮೆ ಮಾಡಿದ್ದಾರೆ. ಸರಕಾರಗಳು ಅಥವಾ ನಿರ್ವಹಣಾ ಘಟಕಗಳು ಕೆಲಸಗಾರರು ಮತ್ತು ಅವರ ಆರೋಗ್ಯದ ಮತ್ತು ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ವಹಿಸಿದರೆ ಕೆಲಸಗಾರರು ಬರುತ್ತಾರೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ ಅವರು ಅಧ್ಯಕ್ಷತೆವಹಿಸಿ ಮಾತನಾಡಿ ಇಂದು ಬಳಸಿ ಬಿಸಾಡುವ ಸಂಸ್ಕೃತಿಗೆ ನಾವು ಬಂದು ನಿಂತಿದ್ದೇವೆ. ಇದರಿಂದಾಗಿ ಬಿಸಾಡಿದ ವಸ್ತುಗಳಿಂದ ದೊಡ್ಡ ಸಮಸ್ಯೆ ಉಂಟಾಗುತ್ತಿದೆ. ಬಳ್ಳಾರಿ ರಾಯಚೂರು ವಿಜಯನಗರ ಭಾಗಗಳಲ್ಲಿ ಕಾರ್ಖಾನೆಗಳಲ್ಲಿರುವ ಕಾರ್ಖಾನೆಗಳಿಂದ ಹೊರಬರುವ ತ್ಯಾಜ್ಯಗಳಿಂದ ಸುತ್ತಮುತ್ತ ವಾಸಿಸುವ ಜನರು ಕಾಯಿಲೆಯಿಂದ ಬಳಲುತ್ತಿದ್ದಾರೆ. ಬೇಸಿಗೆಯ ದಿನಗಳಲ್ಲಿ ಈ ಭಾಗಗಳಲ್ಲಿ ಬೂದಿ ತುಂಬಿದ ಮನೆಗಳು ಕಂಡುಬರುತ್ತವೆ ಎಂದರು.

ಪ್ರಪಂಚದ ಮುಖ್ಯ ಸಮಸ್ಯೆಯು ಕಸದ ನಿರ್ವಹಣೆಯೇ ಆಗಿದೆ. ತ್ಯಾಜ್ಯ ನಿರ್ವಹಣೆಗಾರರಿಗೆ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ಕ್ರಮವಾಗಿ ಅವರಿಗೆ ಬೇಕಾದ ಮಾಸ್ಕ್ ಗ್ಲೌಸ್‌ಗಳನ್ನು ನೀಡಬೇಕು ಎಂದು ಹೇಳಿದರು. ಪ್ರವಾಸಿ ಸ್ಥಾನವಾದ ಹಂಪಿ ಹಾಗೂ ಹಲವಾರು ಕಡೆಗಳಲ್ಲಿ ಪ್ರವಾಸಿಗರಿಂದ ಅತಿ ಹೆಚ್ಚಾಗಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯಾಗುತ್ತಿವೆ. ಗುಡ್ಡಗಾಡು ಪ್ರದೇಶದಲ್ಲಿ ನಮ್ಮ ಕಣ್ಣಿಗೆ ಪ್ಲಾಸ್ಟಿಕ್‌ಗಳೇ ಕಾಣುತ್ತವೆ. ಇದು ಪರಿಸರ ನಾಶಕ್ಕೆ ಪ್ರಮುಖ ಪಾತ್ರವಹಿಸುತ್ತದೆ ಎಂದು ಹೇಳಿದರು.

ಎನ್.ಎಸ್.ಎಸ್ ಘಟಕದ ಸಂಯೋಜನಾಧಿಕಾರಿಗಳಾದ ಡಾ. ಎ. ಶ್ರೀಧರ್ ಸ್ವಾಗತಿಸಿದರು. ಕಾರ್ಯಕ್ರಮವನ್ನು ಇಂಗ್ಲಿಷ್ ಅಧ್ಯಾಪಕರಾದ ಜ್ಯೋತಿ ನಿರೂಪಿಸಿ, ವಂದಿಸಿದರು. ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ವಿಜಯ ಪೂಣಚ್ಚ ತಂಬಂಡ ಅವರು, ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು. ಶಿಬಿರಾರ್ಥಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಆಂಗ್ಲ ಭರಾಟೆಯಲ್ಲಿ ಕನ್ನಡ ಮರೆಯಬೇಡಿ

**ಮೊದಲ ಪುಟದಿಂದ**

ಕಾದಂಬರಿ ಕ್ಷೇತ್ರ ಸಾಹಿತ್ಯ ಶ್ರೀಮಂತಿಕೆಯಿಂದ ಕೂಡಿದ್ದು ಸಂಶೋಧನೆಯ ಲಕ್ಷಣ ಹೊಂದಿದೆ. ಬಂಗಿ ದೊಡ್ಡ ಮಂಜುನಾಥರ 'ವಾರಾಹಿ' ಕಾದಂಬರಿಯು ಮಹಿಳಾ ಕೇಂದ್ರೀತವಾಗಿದ್ದು ಮಹಿಳೆಯ ಧ್ವನಿ ಪ್ರತಿನಿಧಿಸಿದೆ. ಹೆಣ್ಣಿನ ಪ್ರಾಮುಖ್ಯತೆಯನ್ನು ಕಾದಂಬರಿಯಲ್ಲಿ ಮಿಳಿತವಾಗಿದೆ. ವ್ಯಕ್ತಿವಾದ ಆಧುನಿಕತೆಯ ಆಶಯವಾಗಿದ್ದರಿಂದ ಸಂಘಟನೆಗಳ ಒಡಕಿಗೆ ಕಾರಣವಾಗಿದೆ ಎಂದರು.

ಕೊಪ್ಪಳದ ಸಾಹಿತಿ ಅಕ್ಬರ್ ಸಿ.ಕಾಲಿಮಿರ್ಚಿ 'ವಾರಾಹಿ' ಕಾದಂಬರಿ ವಿಮರ್ಶಿಸಿ ಮಾತನಾಡಿ, 'ವಾರಾಹಿ' ಕಾದಂಬರಿಯು ಓದಿಸಿಕೊಂಡು ಹೋಗುವ ಜಾಡು ಹೊಂದಿದ್ದರಿಂದ ಬೇಸರ ತರಿಸುವುದಿಲ್ಲ. ಕಾದಂಬರಿಯ ಎಲ್ಲಾ ಪಾತ್ರಗಳು ಓದುಗರನ್ನು ಬೆರಗುಗೊಳಿಸುತ್ತವೆ. ಕಾದಂಬರಿಯ ವಸ್ತು, ವಿಷಯ ವಿಭಿನ್ನ ಶೈಲಿ ಹೊಂದಿದ್ದು ಕಂಪ್ಲಿ ಭಾಗದ ಭಾಷಾ ಸೊಗಡನ್ನು ಹೊಂದಿದೆ. ಲೇಖಕರ ಕೃತಿ ಕೊಂಡು ಓದುವ ಸಂಸ್ಕೃತಿ ಬೆಳೆಯಬೇಕಿದೆ ಎಂದರು.

ಗಣಿಮಾಲೀಕ ಗೊಗ್ಗ ಚನ್ನಬಸವರಾಜ ಮಾತನಾಡಿ, ಓದುವ ಹವ್ಯಾಸ ಬೆಳೆಸಿಕೊಳ್ಳಬೇಕಿದೆ. ಕಂಪ್ಲಿ ಸಾಹಿತ್ಯ ಸಿರಿವಂತಿಕೆ ಹೊಂದಿದೆ ಎಂದರು.

ಕಸಾಪ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಾ ಪಂಥಗಳ ಬರಹಗಾರರ ವೇದಿಕೆಯಾಗಿದೆ. ವಿಚಾರಗಳನ್ನು ಮಂಡಿಸುವಲ್ಲಿ ಕಸಾಪ ಪ್ರಮುಖ ವೇದಿಕೆಯಾಗಿದೆ ಎಂದರು.

ಆರಕ್ಷಕ ನಿರೀಕ್ಷಕ ಕೆ.ಬಿ.ವಾಸುಕುಮಾರ್ ಮಾತನಾಡಿ, ಸಾಹಿತ್ಯ ಅಭಿರುಚಿ ಹೊಂದಿದ್ದಲ್ಲಿ ಸುಖ ಸಂತಸದ ಜೀವನ ಸಾಗಿಸಬಹುದು. ಸಾಹಿತ್ಯ ಜೀವನದ ಪಾಠ ಕಲಿಸುತ್ತದೆ. ಸಾಹಿತ್ಯದಿಂದ ಸಂಸ್ಕಾರ, ಜೀವನಮೌಲ್ಯಗಳ ಪರಿಚಯವಾಗುತ್ತದೆ ಎಂದರು.

ಕಸಾಪ ತಾಲೂಕು ಅಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ ಅಧ್ಯಕ್ಷತೆವಹಿಸಿದ್ದರು. ಕನ್ನಡ ಹಿತರಕ್ಷಕ ಸಂಘದ ಗೌರವಾಧ್ಯಕ್ಷ ಕ.ಮ.ಹೇಮಯ್ಯಸ್ವಾಮಿ, ಪಾಠಶಾಲೆ ನಿವೃತ್ತ ಪ್ರಾಚಾರ್ಯ ಎಂ.ಎಸ್.ಶಶಿಧರಶಾಸ್ತ್ರಿ, ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಂ.ಎಸ್.ಗಂಗಾಧರಯ್ಯ, ಕಸಾಪ ಪದಾಧಿಕಾರಿ ಗಳಾದ ಅಂಬಿಗರ ಮಂಜುನಾಥ, ಎಸ್.ಡಿ. ಬಸವರಾಜ, ಸಿ.ವೆಂಕಟೇಶ, ಬಡಿಗೇರ ಜಿಲಾನ್ ಸಾಬ್, ಎಸ್.ಶಾಮಸುಂದರಾವ್, ಹಾದಿಮನಿ ಕಾಳಿಂಗವರ್ಧನ, ಅಶೋಕ ಕುಕನೂರು, ಎಲಿಗಾರ ವೆಂಕಟರೆಡ್ಡಿ ಇತರರಿದ್ದರು.

**SSV EXCELLENT**
**SPOKEN ENGLISH CLASS, HOSPET**
ಪ್ರಿಯ ಪೋಷಕರೇ ಹಾಗೂ ವಿದ್ಯಾರ್ಥಿಗಳೇ,
ನಮ್ಮ SSV ಯಲ್ಲಿ 1ರಿಂದ 9ನೇ ತರಗತಿ
ಓದುವ ಮಕ್ಕಳಿಗೂ ಮತ್ತು ಎಲ್ಲಾ ಸ್ಪರ್ಧಾತ್ಮಕ
ಪರಿಕ್ಷೆ ಬರೆಯುವ ವಿದ್ಯಾರ್ಥಿಗಳಿಗಾಗಿ
ಕಲಿಕೆಯ ತರಗತಿಗಳನ್ನು ನಡೆಸಲಾಗುತ್ತದೆ.
ಆಸಕ್ತಿಯುಳ್ಳ ಪೋಷಕರು ಹಾಗೂ ವಿದ್ಯಾರ್ಥಿಗಳು
ಇಂದೇ ನಿಮ್ಮ ಹೆಸರನ್ನು ನೋಂದಾಯಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
A. ಮೂರ್ತಿ–99863 38861
M.C. ಪ್ರೇಮ –91643 71478

14 ಭಾಷೆ
ಈಗ ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA